
ಸಿದ್ಧಗಂಗಾ



" ಆರ್ಥಿಕ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಸ್ವದೇಶೀ ತತ್ವವನ್ನು
ಕೈ ಬಿಟ್ಟದ್ದರಿಂದಲೇ ನಮ್ಮ ಜನಸ್ತೋಮಕ್ಕೆ ಕಡುಬಡತನ ಒದಗಿದೆ.
ಭಾರತದ ಹೊರಗಿನಿಂದ ಒಂದು ವಸ್ತುವನ್ನೂ ಕೊಳ್ಳದಿದ್ದಲ್ಲಿ ನಮ್ಮ
ನಾಡು ಹಾಲು ಜೇನಿನ ಹೊನಲು ಹರಿಯುವ ನಾಡಾಗುತ್ತಿತ್ತು. "

ಅಕ್ಟೋಬರ್, ೧೯೭೫

'ಸಿದ್ಧಗಂಗಾ' ಚಿರಾಯುವಾಗಲೆಂದು

ಹರಸಿ ಹಾರೈಸಿರುವ ಆಜೀವ ಸದಸ್ಯರ ಬಳಗ

490 ಶ್ರೀ ಎಸ್. ಸಿ. ಬಸವರಾಜ್
ಜಯನಗರ
ಬೆಂಗಳೂರು, ||

491 ಶ್ರೀ ಚಿಕ್ಕೇಗೌಡಪ್ಪ
ಗಂಜಲ ಗುಂಟೆ
ಸಿರಾ || ತಾ || ತುಮಕೂರು ಜಿಲ್ಲೆ

492 ಶ್ರೀ ಎಂ ರುದ್ರಪ್ಪ,
ಲಾರಿ ಟ್ರಾನ್ಸ್‌ಪೋರ್ಟ್
ವಿಜಯಪುರ, ಬೆಂಗಳೂರು ಜಿಲ್ಲೆ

493 ಶ್ರೀ ಎನ್. ನಂಜಪ್ಪ, ಏಜೆಂಟ್
ದೇವನ ಹಳ್ಳಿ, ಬೆಂಗಳೂರು ಜಿಲ್ಲೆ

494 ಶ್ರೀ ಎಲ್. ರಾಮಯ್ಯ, ಮರ್ಚೆಂಟ್
ದೇವನ ಹಳ್ಳಿ, ಬೆಂಗಳೂರು ಜಿಲ್ಲೆ

495 ಶ್ರೀ ಜಿ. ಎನ್. ಪುಟ್ಟಪ್ಪ, & ಬ್ರದರ್ಸ್
S/o ನಂಜಪ್ಪ ಗಿರಿಯಾಪುರ,
ಕಡೂರು ||ತಾ|| ಚಿಕ್ಕಮಗಳೂರು ಜಿಲ್ಲೆ

496 ಶ್ರೀ ಕೆ. ರಾಜಣ್ಣ, ಮರ್ಚೆಂಟ್
ವಿಜಯ ಪುರ, ಬೆಂಗಳೂರು ಜಿಲ್ಲೆ

497 ಶ್ರಿ ಸಿ. ಚಂದ್ರಶೇಖರ
ಮಹದೇಶ್ವರ ಸರ್ವೀಸ್ ಸ್ಟೇಷನ್
ವಿಜಯಪುರ, ಬೆಂಗಳೂರು ಜಿಲ್ಲೆ

493 ಶೀ ಜಿ ವೀರಭದ್ರಪ್ಪ & ಬ್ರದರ್ಸ್
ಮರ್ಚೆಂಟ್ಸ್ ವಿಜಯ ಪುರ,
ಬೆಂಗಳೂರು ಜಿಲ್ಲೆ

499 ಶ್ರೀ ಶಿವರುದ್ರಪ್ಪ S/o ಚಿಕ್ಕಮುನಿಯಪ್ಪ
ಕೋಡಿಮಂಚೇನ ಹಳ್ಳಿ
ದೇವನಹಳ್ಳಿ ||ತಾ|| ಬೆಂಗಳೂರು ಜಿಲ್ಲೆ

500 ಶ್ರೀ ಡಿ ಎಂ. ನಾರಾಯಣ ಸ್ವಾಮಿ
S/o ಡಿ. ವಿ. ಮುನಿಶಾಮಪ್ಪ
ಮರು ಬಾಗಿಲು ದೇವನಹಳ್ಳಿ ||ತಾ||
ಬೆಂಗಳೂರು ಜಿಲ್ಲೆ,

501 ಶ್ರೀಮತಿ ಸಿ ವಿ ಪಾರ್ವತಮ್ಮ
W/o ಶ್ರೀ ಚಿನ್ನಯ್ಯ
ಚಿಕ್ಕ ಬಳ್ಳಾಪುರ ಕೋಲಾಜಿಲ್ಲೆ

502 ಶ್ರೀ ಅನಂತಪ್ಪ ಡಿ ಎಂ. ಇ,
ಬಿ ಇ.ಎಂ.ಎಲ್
ಕೆ ಜಿ ಎಫ್

503 ಶ್ರೀ ಮತಿ ಬಸಮ್ಮ
W/o ಹುಚ್ಚ ಬಸಪ್ಪ
ನೆಲಿವಾಗಿಲು
ಶಿಕಾರಿಪುರ ||ತಾ|| ಶಿವಮೊಗ್ಗ ಜಿಲ್ಲೆ

504 ಶ್ರೀ ಹೆ ಚ್ ಗಿರಿಯಪ್ಪ, ಹೆಡ್ ಮಾಸ್ಟರ್
ವಿನಾಯಕ ರೂರಲ್ ಹೈಸ್ಕೂಲ್.
ಸಿಟ್ಟೋರು, ತುಮಕೂರು ಜಿಲ್ಲೆ

505 ಶ್ರೀ ಎಲ್. ಶಿವಯ್ಯ, ಸಹೋಪಾಧ್ಯಾಯರು
ವಿನಾಯಕ ರೂರಲ್ ಹೈಸ್ಕೂಲ್,
ಸಿಟ್ಟೋರು, ತುಮಕೂರು ಜಿಲ್ಲೆ.

506 ಶ್ರೀ ಎಂ.ಜಿ. ಚನ್ನಬಸವಯ್ಯ, ಶಿಕ್ಷಕರು.
ವಿನಾಯಕ ರೂರಲ್ ಹೈಸ್ಕೂಲ್,
ಸಿಟ್ಟೋರು, ತುಮಕೂರು ಜಿಲ್ಲೆ.

507 ಶ್ರೀ ಎನ್. ಬಿ. ಷಡಾಕ್ಷರಪ್ಪ, ದೈಹಿಕ ಶಿಕ್ಷಣ
ಶಿಕ್ಷಕರು, S/o ಬಸಪ್ಪ
ಸಿಟ್ಟೋರು, ತುಮಕೂರು ಜಿಲ್ಲೆ

508 ಶ್ರೀ ಟಿ. ವಿ ಜಗದೀಶ್
S/o ಶ್ರೀ ಟಿ ಸಿ. ವೀರಭದ್ರಯ್ಯ
ತಿಪ್ಪಸಂದ್ರ, ಮಾಗಡಿ ||ತಾ||
ಬೆಂಗಳೂರು ಜಿಲ್ಲೆ

509 ಶ್ರೀ ಸಿ. ಆರ್. ರುದ್ರಯ್ಯ
ಚಿಕ್ಕಪೇಟೆ, ಬೆಂಗಳೂರು - 53

510 ಶ್ರೀ ಕೆ ಬಿ. ದೊಡ್ಡರಾಜಪ್ಪ
ಮಾಮೂಲ್ ಪೇಟೆ, ಬೆಂಗಳೂರು – 53

(ಮುಂದುವರಿಯುತ್ತದೆ)



ಶ್ರೀವಾಣಿ

ಮಾನವ ಭಗವಂತನ ದೃಷ್ಟಿಯಲ್ಲಿ ಕಿರೀಟ ಪ್ರಾಯ. ಕಾರಣ ಆತನು ಜಗತ್ತಿನ ಜೀವರಾಶಿಗಳಲ್ಲಿ ಅತ್ಯಂತ ಶ್ರೇಷ್ಠ, ವಿಚಾರವಂತ, ಹಾಗೂ ಪ್ರಜ್ಞಾವಂತ. ಮಾನವ ತನ್ನ ಜೀವಿತದ ಉದ್ದಿಶ್ಯವನ್ನು ಅರಿತು ಆಚರಿಸುವ ಮಹಾ ಜ್ಞಾನಿ. ವ್ಯಕ್ತಿ ಹುಟ್ಟುವಿಕೆಯಿಂದ ಸಮಾನವಾದ ಮಾನವತ್ವವನ್ನು ಪಡೆದುಕೊಂಡರೂ ಬಾಳಬದುಕುವುದರಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಈ ದೃಷ್ಟಿಯಿಂದ ಇಡೀ ಮಾನವ ವರ್ಗವನ್ನು ಒಬ್ಬ ಸಂತರು ಐದು ಗುಂಪುಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯ ಗುಂಪಿನವರೆಂದರೆ ತಾನೊಬ್ಬ ಸುಖವಾಗಿದ್ದರೆ ಸಾಕು, ತನ್ನ ಸುಖಕ್ಕಾಗಿ ಯಾರ ಪ್ರಾಣ ಹೋದೂ ಚಿಂತೆಯಿಲ್ಲ ಎನ್ನುವವರು "ಶಿಲಾವರ್ಗದವರು. ಇನ್ನು ಎರಡನೆಯ ವರ್ಗದವರೆಂದರೆ ಇವನಿಗಿಂತ ಸ್ವಲ್ಪ ಮುಂದೆ ಹೋಗಿ ತಾನೂ ಸುಖವಾಗಿದ್ದು ತನ್ನ ಕುಟುಂಬದವರೂ ಸುಖವಾಗಿರಬೇಕು. ಇದಕ್ಕೆ ಅಕ್ಕಪಕ್ಕದ ಕುಟುಂಬದವರು ನಾಶವಾದರೂ ಚಿಂತೆಯಿಲ್ಲವೆಂದು ಭಾವಿಸುವವರು. "ಸಸ್ಯವರ್ಗದವರು" ಇನ್ನೂ ಸ್ವಲ್ಪ ಮುಂದೆ ಹೋಗಿ ತಾನು ತನ್ನ ಕುಟುಂಬದ ಜೊತೆಗೆ ತನ್ನ ಊರಿನವರು ಸುಖವಾಗಿರಬೇಕೆಂದು ಬಯಸಿ, ಇದಕ್ಕಾಗಿ ಇನ್ನೊಂದು ಊರಿನವರು ನಾಶವಾದರೂ ಚಿಂತೆಯಿಲ್ಲವೆಂದು ಭಾವಿಸುವವರು "ಪ್ರಾಣಿವರ್ಗದವರು" ನಾಲ್ಕನೆಯ ವರ್ಗದವರೆಂದರೆ ತಾನು ತನ್ನ ಕುಟುಂಬ, ತನ್ನ ಊರು ಮತ್ತು ರಾಷ್ಟ್ರದ ಒಳಿತಿಗಾಗಿ ಮತ್ತೊಂದು ರಾಷ್ಟ್ರದ ನಾಶಕ್ಕೆ ಪ್ರಯತ್ನ ಪಡುವವರು "ಮಾನವ ವರ್ಗದವರು." ಕೊನೆಯದಾಗಿ ಹಿಂದೆ ಹೇಳಿದ ಎಲ್ಲರ ಸುಖವಷ್ಟೇ ಅಲ್ಲ ಇಡೀ ವಿಶ್ವವೇ ಸುಖ ಶಾಂತಿ ಸಮೃದ್ಧಿಯನ್ನು ಕಾಣಬೇಕೆಂದು ವಿಶ್ವಪ್ರೇಮಿಗಳಾಗಿ ಬಾಳಿ ಬೆಳಗಬೇಕೆನ್ನುವವರು "ದೈವೀವರ್ಗದ" ಮಾನವರು. "ಉದಾರ ಚರಿತಾನಾಂತು ವಸುಧೈವ ಕುಟುಂಬಕಂ" ಎನ್ನುವ ಉದಾತ್ತ ತತ್ವವುಳ್ಳ ವ್ಯಕ್ತಿ ಮಹಾತ್ಮ ಗಾಂಧೀಜಿ ಕೊನೆಯದಾದ ದೈವೀವರ್ಗದ ಮಾನವ. ಈ ಪುಣ್ಯ ಪುರುಷನನ್ನು ನಾವು ಕೇವಲ ಭಾರತೀಯನೆಂದು ಭಾವಿಸಿದರೆ ತಪ್ಪಾಗುತ್ತದೆ. ಆದ್ದರಿಂದ ಗಾಂಧಿಯನ್ನು ಇಡೀ ವಿಶ್ವವನ್ನೇ ಒಂದು ಕುಟುಂಬವಾಗಿ ಕಂಡ ವಿಶ್ವ ಕುಟುಂಬಿ ಹಾಗೂ ಮಹಾ ಮಾನವತಾವಾದಿ ಮತ್ತು ಸರ್ವಸಮತಾವಾದಿ ಎಂದು ಭಾವಿಸಿದರೆ ಅತ್ಯಂತ ಸೂಕ್ತವಾದುದು.

‘ಸಿದ್ಧಗಂಗಾ’

ಅಕ್ಟೋಬರ್, ೧೯೭೮

ಸಂಪುಟ-೧೪ ಸಂಚಿಕೆ-೧೦

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿಸಂಘದ ಪರವಾಗಿ

ಸಂಪಾದಕ ಮಂಡಲಿ
ಪಂ|| ಚನ್ನಪ್ಪ ಎರೇಸೀಮೆ
ಪಿ. ಎನ್. ಚಂದ್ರಶೇಖರಯ್ಯ
ವಿರೂಪಾಕ್ಷಯ್ಯ
ಬಸವರಾಜು

ಜಾಹಿರಾತು ವ್ಯವಸ್ಥಾಪಕರು
ಎಂ. ರೇಣುಕಾರಾಧ್ಯ

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ
ಅಜೀವ ಸದಸ್ಯತ್ವ: **151-00** ರೂ
ವಾರ್ಷಿಕ ಚಂದಾ: **10-00** ರೂ

ಈ ಸಂಚಿಕೆಯಲ್ಲಿ

ಮುಖಪುಟ

ಸತ್ಯ-ಅಹಿಂಸೆ ತತ್ವ ಹೊತ್ತ ಲೋಕ ವಿಖ್ಯಾತಿಯಿಂದ
ಮಾನವ ಕಲ್ಯಾಣವೆಸಗಿದ ಗಾಂಧಿ ತನ್ನ ಕರ್ಮದಿಂದ

ಲೇಖಕರಲ್ಲಿ ಮನವಿ

‘ಸಿದ್ಧಗಂಗಾ’ ಲೇಖಕರಿಂದ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಹಾಗೂ ವೈಚಾರಿಕ ಲೇಖನಗಳು, ಸಣ್ಣಕಥೆ, ಕವನ, ನಗೇಹನಿ, ಪ್ರಬಂಧ ಇವುಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿದ್ದು, ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸ್ವೀಕೃತ ಲೇಖನಗಳಿಗೆ ‘ಸಿದ್ಧಗಂಗಾ’ ಆಗಿಂದಾಗ್ಗೆ ನಿಗದಿಪಡಿಸಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಲೇಖನಗಳನ್ನು

“ಸಂಪಾದಕರು”
“ಸಿದ್ಧಗಂಗಾ” [ಕನ್ನಡ ಮಾಸ ಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ-572131 ತುಮಕೂರು ಜಿಲ್ಲೆ.

ಇವರಿಗೆ ಕಳಿಸಿಕೊಡಬೇಕಾಗಿ ಪ್ರಾರ್ಥನೆ.

ಚಂದಾದಾರರಲ್ಲಿ ಮನವಿ

ಹೊಸ ವರ್ಷದ ನಿಮ್ಮ ಚಂದಾ ನಂಬರ್ ಗುರುತಿಸಿಕೊಳ್ಳಿ. ಚಂದಾ ಅವಧಿ ಮುಗಿಯುವವರೆಗೆ ವಿಳಾಸ ಬದಲಾವಣೆ ಮತ್ತು ಇತರೆ ಬಗ್ಗೆ ವ್ಯವಹರಿಸುವಾಗ ನಿಮ್ಮ ವಿಳಾಸದ ಹಿಂಬದಿ ಇರುವ ಚಂದಾ ನಂಬರ್ ಅಥವಾ ಯಾರ ಮೂಲಕ ಸದಸ್ಯತ್ವ ಪಡೆದಿರುವಿರೋ ಆ ನಮ್ಮ ಪ್ರತಿನಿಧಿಗಳ ಹೆಸರನ್ನು ಸೂಚಿಸಿ ವ್ಯವಹರಿಸಿ.

ಚಂದಾ ಬಾಕಿ ಇರುವವರು ಸಂದಾಯ ಮಾಡಿ ‘ಸಿದ್ಧಗಂಗಾ’ ಮುನ್ನಡೆಗೆ ಸಹಕರಿಸಿ.

ಚಂದಾ ಅವಧಿ ಮುಗಿದಿರುವ ಮಾನ್ಯ ಓದುಗರು ಮುಂದಿನ ಸಾಲಿಗೆ ಮುಂದುವರಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಪ್ರಕಾಶಕರು
‘ಸಿದ್ಧಗಂಗಾ’ ಮಾಸ ಪತ್ರಿಕೆ, ಸಿದ್ಧಗಂಗಾ ಮಠ-572131 ತುಮಕೂರು ಜಿಲ್ಲೆ.

ನವನೀತ

(ಸಂಸ್ಕೃತ ಶ್ಲೋಕಗಳ ಭಾವಾನುವಾದ)

ಉತ್ತಮಃ ಕ್ಲೇಶ ವಿಕ್ಷೋಭಂ ಕ್ಷಮಃ ಸೋಢುಂ ನಹೀತರಃ ।
ಮಣಿರೇವ ಮಹಾಶಾಣ—ಘರ್ಷಣಂ ನತು ಮೃತ್ಕಣಃ ॥

ಕಷ್ಟದಿಂದಾದ ಕ್ಷೋಭೆಯನು ಸಹಿಸಬಲ್ಲನು ಉತ್ತಮನು,
ಸಹಿಸಲಂಜುವನು ಕಷ್ಟದ ಕ್ಷೋಭೆಯನು ತಾನಲ್ಪನು.
ಸಾಣೆಕಲ ಘರ್ಷಣೆಯ ರತ್ನಸಹಿಸಬಲ್ಲುದೇ ಹೊರತು,
ಕಲ್ಲ ಘರ್ಷಣೆಯ ಮಣ್ಣಕಣ ಸಹಿಸುವುದು ತಾನೆಂತು.

§§

ಉದೇತಿ ಸವಿತಾ ತಾಮ್ರಸ್ತಾಮ್ರ ಏವಾಸ್ತಿಮೇತಿ ಚ ।
ಸಂಗತ್ತೌಚ ವಿಪತ್ತೌಚ ಮಹತಾಮೇಕರೂಪತಾ ॥

ಮೂಡುವ ಸೂರ್ಯನ ಬಣ್ಣತಾ ಕೆಂಪು,
ಅಸ್ತಂಗತಿಸುವಾಗ ಇರುವುದು ಅದೇ ಮೊದಲ ಕೆಂಪು.
ಸಂಪತ್ತು ವಿಪತ್ತುಗಳೆರಡು ತಮಗೆ ಬಂದಾಗ,
ಮಹಾತ್ಮರ ಸ್ವಭಾವ ಇರುವುದು ಒಂದೇಸಮನಾಗ.

ಗುಣ ದೋಷೌ ಬುಧೋ ಗೃಹ್ಣನ್ನಿಂದು ಕ್ಷ್ವೇಡಾ ವಿವೇಶ್ವರಃ ।
ಶಿರಸಾ ಶ್ಲಾಘತೇ ಪೂರ್ವಂ ಪರಂ ಕಂಠೇ ನಿಯಚ್ಛತಿ ॥

ಈಶ್ವರನು ಚಂದ್ರನನು ವಿಷಗಳನು ಗ್ರಹಿಸಿದಂತೆ ;
ಪಂಡಿತನು ಗುಣಗಳನು ದೋಷಗಳನು ಗ್ರಹಿಸುವನಂತೆ-
ಅವುಗಳಲಿ ಮೊದಲನೆಯದ ತಲೆಯಲಿ ಅಭಿನಂದಿಸುತ್ತಾನೆ ;
ಎರಡನೆಯದ ಕಂಠದಲ್ಲಿಯೇ ತಡೆಯಿಡಿದು ನಿಲ್ಲಿಸುತ್ತಾನೆ-

—ಕಾವ್ಯ ಸುಧಾಪ್ರಿಯ

ಅಮೃತ ಬಿಂದು

“ಸತ್ಯಮೇವ ಜಯತೇ”—ಹೀಗೆಂದು ಇಪ್ಪತ್ತನೆಯ ಶತಮಾನದಲ್ಲಿ ಯುಗಪುರುಷನಾಗಿ ಬಾಳಿಬೆಳಗಿದ ವ್ಯಕ್ತಿ ಮಹಾತ್ಮಗಾಂಧಿ. ಗಾಂಧಿ ಕೇವಲ ಒಬ್ಬವ್ಯಕ್ತಿಯಲ್ಲ ಅದೊಂದು ಶಕ್ತಿಯಾಗಿ ಬೆಳಗಿದ ಚೇತನ. ಈ ಚೇತನ ನಮ್ಮ ಕಣ್ಣಮುಂದೆಯೇ ನಮ್ಮಲ್ಲಿಯೆ ಇದ್ದು ನಮ್ಮ ತನವನ್ನು ಮೀರಿನಿಂತ ವಿಶ್ವವ್ಯಕ್ತಿ. ತಮ್ಮ ಅಚಲವಾದ ಸತ್ಯಪಥದಿಂದ ಚಲಿತರಾಗದೇ ಮಾನವತ್ವವನ್ನು ಮರೆತು ಪಶುಗಳಂತೆ ವರ್ತಿಸುತ್ತಿದ್ದ ಇಂದಿನ ಬಲಿಷ್ಠರ ಹೃದಯವನ್ನು ಗಾಂಧೀಜಿ ಸತ್ಯಪ್ರೇಮ ದಯೆಗಳಿಂದ ಪರಿವರ್ತಿಸಿ ದೇವತ್ವವನ್ನು ತೋರಿಸಿಕೊಟ್ಟಹಿರಿಯ ವ್ಯಕ್ತಿ. ಸತ್ಯ, ಅಹಿಂಸೆ ಎಂಬ ಸೂತ್ರಗಳನ್ನು ಹಿಡಿದು ಜಗತ್ತಿಗೇ ಮಾರ್ಗದರ್ಶಕರಾದರು. ಸತ್ಯ ಮತ್ತು ಅಹಿಂಸೆಗಳೆರಡೂ ದಿವ್ಯಾಸ್ತ್ರ ಮಹಾಸ್ತ್ರಗಳಾಗಿ ಪರಿಣಮಿಸಿದವು. ಈ ಶಾಂತಿ ಅಸ್ತ್ರಗಳಿಂದಲೇ ಸತ್ಯಾಗ್ರಹಿಗಳ ಸೈನ್ಯವನ್ನು ಸೇರಿಸಿ ಯೋಧರಂತೆ ಹೋರಾಡಿ ಜಗತ್ಕಲ್ಯಾಣದ ಮಾರ್ಗವನ್ನು ತೋರಿಸಿದರು. ವ್ಯಕ್ತಿ, ದೇಶ, ರಾಷ್ಟ್ರಗಳ ಕಲ್ಪನೆಯನ್ನು ಮೀರಿ ಮಾನವ ಕೋಟಿಯ ಸುಖ ಶಾಂತಿಗಳಿಗಾಗಿ ಶ್ರಮಿಸಿದ ಮಹಾ ಮಾನವತಾವಾದಿಯಾಗಿ ಜಗನ್ಮಾನ್ಯರಾದರು. ಜಗತ್ತಿಗೇ ಪೂಜ್ಯರಾಗಿ ಜಗತ್ತಿಗೇ ಬೇಕಾದವರಾದರು.

—ದುಂಬಿ

ಗಾಂಧೀಜಿ ಕಲಾಯಾತ್ರೆಯಲ್ಲಿ ರಸ ನಿಮಿಷಗಳು

—ಪಿ. ಆರ್. ತಿಪ್ಪೇಸ್ವಾಮಿ.

"ನಾನೇನು ಸಾಹಿತಿ ಅಲ್ಲ. ದಕ್ಷಿಣ ಭಾರತದ ನಿಮ್ಮ ಸಾಹಿತ್ಯದ ಬಗ್ಗೆ ನಾನೇನು ಮಾತಾಡಬಲ್ಲೆ? ಅಲ್ಪ ಸ್ವಲ್ಪ ಗುಜರಾತಿ ಮಾತ್ರ ನನಗೆ ಗೊತ್ತಿದೆ. ನಿಮ್ಮಂಥ ಬರಹಗಾರರ, ಕಲಾವಿದರ ಗುಂಪನ್ನು ಉದ್ದೇಶಿಸಿ ನಾನೇನು ಮಾತಾಡಲಿ? ಆದರೆ, ಒಂದು ಅರ್ಥದಲ್ಲಿ ನಾನೊಬ್ಬ ಕಲಾವಿದನೆಂದುಕೊಳ್ಳಬಲ್ಲೆ. ಅದು ಇರಲಿ, ಇಲ್ಲಿ ನಿಮ್ಮಲ್ಲಿ ಎಷ್ಟು ಜನರು ಕಲಾವಿದರಿದ್ದೀರಿ ಕೊಂಚ ಹೇಳಬಲ್ಲಿರಾ?" ಎಂದು ಗಾಂಧೀಜಿ ಅವರು ಅಲ್ಲಿಸೇರಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ "ಕಲಾವಿದರಿದ್ದರೆ ತಮ್ಮ ತಮ್ಮ ಕೈಗಳನ್ನು ಮೇಲಕ್ಕೆತ್ತುತ್ತೀರಾ'' ಎಂದು ಕರೆ ಇತ್ತರು'

ಗಾಂಧೀಜಿ ಅವರು ಈ ಮಾತುಗಳನ್ನು 1946 ರ ಜನವರಿ 30ರಂದು ಮದರಾಸಿನಲ್ಲಿ ನುಡಿದಿದ್ದರು 'ದಕ್ಷಿಣ ಭಾರತ ಹಿಂದೀ ಪರಿಷತ್ ಸಭಾ' ಏರ್ಪಡಿಸಿದ್ದ ಬರಹಗಾರರ ಮತ್ತು ಕರಾವಿದರ ಸಮ್ಮೇಳನವನ್ನು ಉದ್ದೇಶಿಸಿ ಭಾಷಣ ಮಾಡಲು ಪ್ರಾರಂಭಿಸಿದರು.

ಬಾಪೂಜಿ ಅವರ ಕರೆಗೆ ಆ ಸಭೆಯಲ್ಲಿ ಕೆಲವುಜನ ಮಾತ್ರ ಕೈ ಎತ್ತಿದ್ದನ್ನು ಗಮನಿಸಿ "ಓ ಇಷ್ಟೇ ಜನ ಕಲಾವಿದರೇ' ಎಂದು ನಕ್ಕರು. ಅವರನ್ನು ಕುರಿತು ಮಾತು ಮುಂದುವರಿಸಿ ಕಲೆ ಎಂದರೆ ಜೀವನಕಲೆ, ಅಹಿಂಸಾ ಮಾರ್ಗದ ಜೀವನವೇ ಒಂದು ಕಲೆ ಎಂದರು. ಈ ಕಲೆಯನ್ನು ನಾನು ಅಭ್ಯಾಸ ಮಾಡಿರುವೆ ಸೌಂದರ್ಯವನ್ನು ನೀವೆಲ್ಲರೂ ಸೃಷ್ಟಿಸಿರಿ , ಆದರೆ ಅದು ಸತ್ಯ ಹಾಗೂ ಅಹಿಂಸೆಯಿಂದ ಕೂಡಿದ ಮಾರ್ಗವಾಗಿರಬೇಕು".

"ಈಗ ನಾವುಗಳು ಒಂದು ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಕಲಾವಿದರು ಮತ್ತು ಬರಹಗಾರರು ಆದ ನೀವು ಇಲ್ಲಿ ಹೆಚ್ಚು ಮಂದಿ ಸೇರಿದ್ದೀರಿ. ಅಲ್ಲದೆ ಈಗಾಗಲೇ ಸುದೀರ್ಘ ಕಾಲ ದುಡಿದಿದ್ದೀರಿ. ಸ್ವರಾಜ್ಯ ಎಂಬುದು ಇನ್ನೂ ಏಕೆ ಸಾಧಿಸಲಾಗಲಿಲ್ಲ? ಸ್ವರಾಜ್ಯ ಪಡೆಯುವುದೂ ಒಂದು ಕಲೆ ಎಂಬುದು ನೀವು ಬಲ್ಲಿರಾ? ಈಗಲೂ ನೀವುಗಳು ಈ ಬಗ್ಗೆ ಆಲೋಚಿಸಿರಿ, ಅದಕ್ಕೆ ಕಾರಣ ಏನೆಂಬುದು ಕಂಡುಕೊಳ್ಳಿರಿ," ಎಂದು ಬಾಪೂಜಿಯು ತಮ್ಮ ಹೃದಯದ ಅಂತರಾಳದ ತುಮುಲದ ಕಳಕಳಿ ನುಡಿಗಳು ಹೊರ ಚಿಮ್ಮಿದವು.

ಈ ಸಭೆಯಲ್ಲಿ ಖ್ಯಾತ ಕಲಾವಿದ ಶ್ರೀ ಚಂಕೂರ್ ತಾವು ರಚಿಸಿದ 'ದಿ ನ್ಯೂ ಲೈಟ್ ಆಫ್ ಏಷ್ಯ' ಎಂಬುದನ್ನು ಗಾಂಧೀಜಿ ಅವರಿಗೆ ಅರ್ಪಿಸಿದರು.

ಆ ಚಿತ್ರವನ್ನು ಸ್ವೀಕರಿಸಿದ ಗಾಂಧೀಜಿ – "ಓ! ನೀವು ನನ್ನನ್ನು ಯುವಕನಂತೆ ಚಿತ್ರಿಸಿದ್ದೀರಿ. ಸಂತೋಷ, ಈಗ ಇದನ್ನು ಹರಾಜಿಗಾಗಿ ಇಲ್ಲಿರಿಸುವೆ" ಎಂದರು.

ಇದು ಒಂದು ಮನೋಜ್ಞ ಪ್ರದರ್ಶನವೇ ಆಯಿತು. ಈ ಕೃತಿಯ ಜೊತೆಗೆ ಗಾಂಧೀಜಿ ಅವರಿಗೆ ಅವರ ವಿವಿಧ ಭಂಗಿಯ ಅಪರೂಪ ಛಾಯಾ ಚಿತ್ರಗಳ ಆಲ್ಬಮ್ ನೀಡಲಾಗಿತ್ತು.

ಗಾಂಧೀಜಿ ಅವರು ಚಿಂತನೆ ಮಾಡುವಂತಿರುವ ಅವರ ರೂಪಚಿತ್ರದ ಅವರ ತಲೆಯಹಿಂಭಾಗದಲ್ಲಿ ವೃತ್ತಾಕಾರದ ಪ್ರಭಾವದ ಛಾಯೆಯನ್ನು ಒಳಗೊಂಡಿದ್ದು, ಸ್ವಾಭಾವಿಕ ವರ್ಣಗಳಿಂದ ಕೂಡಿ ಸೊಗಸಾಗಿದ್ದಿತು.

ಗಾಂಧೀಜಿ ಅವರು ಆ ಚಿತ್ರದಕಡೆ ಸಭಿಕರ ಗಮನವನ್ನು ಸೆಳೆದು ಬಹಳವಾಗಿ ಶ್ಲಾಘನೆ ಮಾಡುತ್ತಾ "ಇದು ಅತ್ಯದ್ಭುತ ಚಿತ್ರ. ನನ್ನ ಮುದಿತನ ಈ ಚಿತ್ರದಲ್ಲಿಲ್ಲ.

ಇದರ ಬೆಲೆ ಹಣದಲ್ಲಿ ಸರಿಕಟ್ಟಲಾಗದು. ಇಂಥ ಚಿತ್ರಕ್ಕೆ ಹಣ ಕೊಟ್ಟು ಕೊಳ್ಳಲಾರಿರಿ" ಎಂದು ಚಿತ್ರದ ಬಗ್ಗೆ ಗಾಂಧೀಜಿ ಪ್ರಶಂಸೆ ಮಾಡಿದರು.

ಗಾಂಧೀಜಿ ಅವರ ಉದ್ದೇಶ ಏನೆಂದು ಸಭಿಕರು ತಿಳಿಯಲಾಗದೆ ಕೊಂಚ ವೇಳೆ ಅವರಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಇದನ್ನು ಗಮನಿಸಿ ಗಾಂಧೀಜಿ, 'ಏತಕ್ಕೆ ಸುಮ್ಮನಿದ್ದೀರಿ' ಎಂದು ಪ್ರಶ್ನಿಸಿ - ಓ ನನಗೆ ಗೊತ್ತು ನೀವೇಕೆ ಮೂಕರಾಗಿದ್ದೀರಿ ಎಂಬುದು; ಕಲಾವಿದರ ಬರಹಗಾರರ ಜೇಬಿನಲ್ಲಿ ಕಾಸಿಲ್ಲ ಎಂಬುದು ನನಗೆ ಗೊತ್ತು; ಎಂದು ಗಾಂಧೀಜಿ ಹಾಸ್ಯ ಚಟಾಕಿ ಹಾರಿಸಿದಾಗ, ಸಮಗ್ರ ಜನಸ್ತೋಮ ಗಹಗಹಿಸಿ ನಕ್ಕಿತು. ಆ ನಗುವಿನಲ್ಲಿ ಗಾಂಧೀಜಿಯವರ ನಗುವೂ ಸೇರಿಕೊಂಡಿತು.

ಈ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಎಲ್ಲಿಂದಲೋ ಅಲ್ಲಿಗೆ ಧಾವಿಸಿದ್ದನ್ನು ಕಂಡ ಗಾಂಧೀಜಿ "ನಿಮ್ಮಲ್ಲಿ ಯಾರಾದರೂ ಹಣವಿರುವವರು ಇದ್ದೀರಾ? ಇದ್ದರೆ ನಮ್ಮ ಈ ಹರಾಜಿನಲ್ಲಿ ಬಂದು ಸೇರಿಕೊಳ್ಳಿ" ಎಂದು ನುಡಿದರು.

ಆ ಕ್ಷಣ 'ಒಂದು ರೂಪಾಯಿ' ಎಂದು ಕೊಳುವವರೊಬ್ಬರು ಧ್ವನಿ ಎತ್ತಿದ್ದನ್ನು ಕೇಳಿಸಿಕೊಂಡ ಗಾಂಧೀಜಿ 'ಈ ಚಿತ್ರ ಅಷ್ಟು ಅಗ್ಗದ ಮಾಲಲ್ಲ' ಎಂದರು.

ಈ ನುಡಿಗಳಿಂದ ಪರಿವರ್ತನೆಗೊಂಡ ಜನ ಹರಾಜಿನ ಹಣದ ಮೊತ್ತ ಏರುತ್ತ ಹೋಯಿತು. ಒಂದೇಸಾರಿಗೆ ಒಂದು ನೂರು ರೂಪಾಯಿಗೆ ಏರಿತು. 250 ರೂಗೆ ಏರಿದಾಗ ಕೊಂಚವೇಳೆ ವಾತಾವರಣ ಸ್ತಬ್ಧವಾಯಿತು ಗಾಂಧೀಜಿ 'ಒಂದು ಸಾರಿ, ಎಂದು ಕರೆ ಕೊಟ್ಟು "ಈ ಚಿತ್ರ ಹೊರಟು ಹೊಗುತ್ತದೆ ಮತ್ತೆ ಇಂಥದ್ದು ದೊರಕಲಾರದು" ಎಂದು ನುಡಿದರು. ಕೂಡಲೆ 300 ರೂಗಳಿಗೆ ಕರೆ ಬಂದಿತು. ಮತ್ತೆ ಗಾಂಧೀಜಿ ಅವರು 'ಒಂದುಬಾರಿ' ಎಂದು ಕೂಗಿ ಜನಕಡೆ ತಿರುಗಿ ಇಂಥ ಸದವಕಾಶವನ್ನು ಕಳೆದು ಕೊಳ್ಳಬೇಡಿ ಎಂದು ಹೇಳಿ ಮತ್ತೆ "ಎರಡನೇ ಸಾರಿ' ಎಂದು ನೆನಪು ಕೊಟ್ಟರು.

"ಎರಡನೇ ಸಾರಿ, ಎರಡನೆ ಸಾರಿ" ಎಂದು ಮತ್ತೆ ಮತ್ತೆ ಕರೆ ಕೊಡುತ್ತಾ ಮತ್ತೇನಾದರೂ ಏರಿಸುವುದಿದೆಯೇ ಎಂದು ಕೇಳಿದರು. ಆ ಕ್ಷಣ ಮತ್ತೆ 350 ರೂ ಗಳ ಬೇಡಿಕೆ ಬಂದಿತು. ಅದಕ್ಕೂ ಹೆಚ್ಚು ಬೆಲೆಗೆ ಹೋಗಲಾರದೆಂದು ಭಾವಿಸಿದರು — ಗಾಂಧೀಜಿ. ಬಿಡದೆ ಬಿಡದೆ ಹರಾಜು ಕೂಗಿದ ಶ್ರೀ ಪಿ. ಎಸ್. ಕೃಷ್ಣಅಯ್ಯರ್ ಅವರನ್ನು ಗಾಂಧೀಜಿ ಅಭಿನಂದಿಸಿದರು. ಅಯ್ಯರ್ ಅವರು ಗಾಂಧೀಜಿ ಮುಂದೆ ಬಂದು ವಂದಿಸಿ ಅವರ ಹಸ್ತದಿಂದ ಆ ತೈಲಚಿತ್ರವನ್ನು ಸ್ವೀಕರಿಸಿದರು. ಈ ಸನ್ನಿವೇಶ ಆ ಸಭೆಯ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಿತು. ಮತ್ತೊಂದು 'ಆಲ್‌ಬಂ' ನ್ನು ಕೈಗೆ ಎತ್ತಿಕೊಂಡು ಗಾಂಧೀಜಿ ಸಾವಿರಾರು ರೂಪಾಯಿಗಳ ಬೆಲೆ ಬಾಳುವ ಚಿತ್ರಗಳಿರುವ ಈ ಅಪರೂಪದ 'ಆಲ್‌ಬಂ' ಅನ್ನು ಹರಾಜಿಗೆ ಹಾಕುವುದು ಬೇಡ ಎಂದು ನಿರ್ಧರಿಸಿ ತಮ್ಮ ಮುಂದಿನ ಕಾರ್ಯಕ್ರಮಕ್ಕೆ ಹೊರಡಲು ಸಿದ್ಧರಾದರು.

ಆಂಧ್ರ ಪ್ರದೇಶದ ಖ್ಯಾತ ಕಲಾವಿದ ಶ್ರೀ ವಿ.ವಿ. ಭಾಗೀರ್ದವೆ ಅವರು ತಾವು ರಚಿಸಿದ ಪ್ರಕೃತಿ ಚಿತ್ರ ಒಂದನ್ನು ಗಾಂಧೀಜಿ ಅವರಿಗೆ ಅರ್ಪಿಸಿದರು. ಇಲ್ಲಿ ಹರಾಜಿನಲ್ಲಿ ಬಂದ ಹಣವನ್ನು ಹಿಂದಿ ಪ್ರಚಾರಕ್ಕೆ ಹಾಗೂ ಹರಿಜನ ಉದ್ಧಾರಕ್ಕೆ ಕಲಾವಿದ ಚಂಕೂರ್ ಅವರು ವಿನಿಯೋಗಿಸಿದ್ದು ಸಾರ್ಥಕವೆನಿಸಿತ್ತು.

ಈ ಬರಹಗಾರರ ಹಾಗೂ ಕಲಾವಿದರ ಸಮ್ಮೇಳನ ದಕ್ಷಿಣ ಭಾರತವನ್ನು ಪ್ರತಿನಿಧಿಸುವಂತಿತ್ತು. ಬರಹಗಾರರ ಸಮ್ಮೇಳನದ ಅಧ್ಯಕ್ಷತೆಯನ್ನು ಕನ್ನಡ ನಾಡಿನ ಖ್ಯಾತ ಸಾಹಿತಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ವಹಿಸಿದ್ದು ಒಂದು ಅಪೂರ್ವ ಸಂದರ್ಭ. ಕಲಾವಿದರ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಕಸ್ತೂರಿ ವೆಂಕಟೇಶ್ವರ ರಾವ್ ವಹಿಸಿದ್ದರು. ಈ ಸಮ್ಮೇಳನದ ಸಂದರ್ಭದಲ್ಲಿ ದಕ್ಷಿಣ ಇಂಡಿಯಾ ಪ್ರವಾಸ ಕೈಗೊಂಡಿದ್ದ ಗಾಂಧೀಜಿ ಅವರೂ ಇಲ್ಲಿ ಭಾಗವಹಿಸಿದ್ದು ಅವರೊಡನೆ ನಮ್ಮ ಬರಹಗಾರರೂ ಕಲಾವಿದರೂ ಬೆರೆತು ಸವಿದ ರಸನಿಮಿಷಗಳು ಯಾರಾದರೂ ಸ್ಮರಿಸುವಂಥಹವು.

ಕೊನೆಗೂ ಬಂತಾ ಪಿಂಚಣಿ.

ರಾಮುವಿನ ಅಜ್ಜಿಗೆ ಕಾಶೀಯಾತ್ರೆಹಂಬಲ ಹೆಚ್ಚಾಯ್ತು. ಆದರೆ ಆಫೀಸಿಗೆ ಹೋಗಲು ಚಪ್ಪಲಿ ಇರದ ರಾಮು ಯಾತ್ರೆಗೆ ಹೇಗೆ ಕಳಿಸ್ಯಾನು ? ಅಷ್ಟೊತ್ತಿಗೆ ವಿಧವೆ ಪಾತಜ್ಜಿಗೆ ಪಿಂಚಣಿ ಬಂದಸಂಗತಿಕೇಳಿ ಅಜ್ಜೀನೂ ಅರ್ಜಿಹಾಕಿತು. ಆದರೆ ಪಿಂಚಣಿ ಬಂತೆ ? ಅಜ್ಜಿಯಾತ್ರೆಹೋಯ್ತೆ ?
ಈ ಲಘುಹರಟೆ ಓದ್ಧಿ ತಿಳಿಯಿರಿ.

—ಪ್ರಮೀಳ ನಾಗರಾಜ್

ಏನಪ್ಪ ರಾಮು, ಅಮ್ಮ ಚೆನ್ನಾಗಿದ್ದಾರಾ ? ಓ ಪಾತಜ್ಜಿ ಬನ್ನಿ ಬನ್ನಿ, ಅಮ್ಮಾ ಪಾತಜ್ಜಿ ಬಂದಿದಾರೆ, ಏನು ಪಾತಜ್ಜಿನೇ, ಕರಿ ಇಲ್ಲಿಗೇನೇ, ನನಗೆ ಏಳಲ್ಲು ಆಗಲ್ಲ, ಬನ್ನಿ ಅಮ್ಮ ಯಾವಾಗ ಬಂದಿರಿ ? ನೀವು ಈ ಊರಿಗೆ ಬಂದು ಬಹಳ ವರ್ಷವಾಗಿತ್ತಲ್ಲವೇ ?

ಹ.: ಸುಮಾರು 6–7 ವರ್ಷನೇ ಆಗಿತ್ತಮ್ಮ, ಕಾಶಿ, ರಾಮೇಶ್ವರಕ್ಕೆ ಹೋಗಿದ್ದೆ. ಪ್ರಸಾದ ಕೊಟ್ಟು ಮಗಳನ್ನು ನೋಡಿ ಕೊಂಡು ಹೋಗೋಣ ಅಂತ ಬಂದೆ. ನೀವು ಚೆನ್ನಾಗಿದ್ದೀರಾ ತೆಗೆದು ಕೊಳ್ಳಿ ಪ್ರಸಾದ, ನಿಮಗೂ ತಂದಿದ್ದೇನೆ.

ಏನಂದಿರಿ ? ಕಾಶಿಗೆ ಹೋಗಿದ್ದಿರಾ ? ನೀವೇ ಪುಣ್ಯವಂತರಮ್ಮಾ, ನನಗೂ ಆಸೆ ಯಾತ್ರೆ ತೀರ್ಥ ಮಾಡೋಣ ಅಂತ ಆದರೆ ಈಗಿರುವ ತಾಪತ್ರಯದಲ್ಲಿ ಯಾತ್ರೆ ತೀರ್ಥ ಕನಸೇ ಸರಿ. ಪಾಪ, ರಾಮು, ಅವನಿಗೆ ಬರುವ ಸಂಬಳದಲ್ಲಿ ಸಂಸಾರ ತೂಗಿಸುವುದೇ ಕಷ್ಟವಾಗಿರುವಾಗ, ಯಾತ್ರೆಗೆ ಕಳುಹಿಸಿದಂತೇ ಇದೆ. ನನಗೂ ವಯಸ್ಸಾಗುತ್ತಾ ಬಂತು. ಬಾಯಿ ಚಪಲ ಬೇರೆ. ನನ್ನ ಸೊಸೆ ಏನೋ ಅಂತೂ ಮಾಡಿಹಾಕುತ್ತಾಳೆ. ಮೊನ್ನೆ ಏನೋ ಕೇಳಿದ್ದಕ್ಕೆ 'ಸದ್ಯ ತಿಂಗಳ ಕೊನೆ, ಇನ್ನೂ 6 ದಿನ ತಳ್ಳಬೇಕು. ನಿಜ ಚಪಲಕ್ಕಂತೂ ಕೊನೆಯೇ ಇಲ್ಲ' ಎಂದಳು,. ಪಾಪ ಅವಳು ತಾನೆ ಏನು ಮಾಡುತ್ತಾಳೆ, ಅಯ್ಯೋ ನನ್ನ ವಿಷಯಾನೇ ಹೇಳುತ್ತಾ ಇದೀನಲ್ಲಾ, ಯಾತ್ರೆ ವಿಚಾರ ಹೇಗೆ ಎಲ್ಲಾ ಕಡೆ ದೇವರ ದರ್ಶನ ಆಯಿತಾ ಊಟ ತಿಂಡಿ ಸರಿಯಾಗಿತ್ತಾ ?

ದೇವರ ದಯದಿಂದ ಎಲ್ಲೂ ನನಗೆ ತಾಪತ್ರಯವಾಗಲಿಲ್ಲ, ಊಟ ತಿಂಡಿಯ ಏರ್ಪಾಟು ಬಹಳ ಚೆನ್ನಾಗಿತ್ತಮ್ಮ

ಊಟತಿಂಡಿಯ ವಿಚಾರ ಕೇಳುತ್ತಲೂ ಬಾಯಲ್ಲಿ ನೀರೂರಿತು ಅಜ್ಜಿಗೆ.

ಅಂತೂ ಮಗ ಯಾತ್ರೆ ಮಾಡಿಸಿ ಬಿಟ್ಟ. ಎಷ್ಟು ಖರ್ಚಾಯಿತು. ಪುಣ್ಯವಂತರಮ್ಮ ನೀವು ಇಂಥ ಮಗನನ್ನ ಪಡೆಯಾಕ್ಕೆ. ನನ್ನ ಮಗನೋ ಒಳ್ಳೆಯವನು ನಿಜ ಆದರೆ ಅವನುತಾನೆ ಹೇಗಜ್ಜಿ ಕೊಡುತಾನೆ ಅಷ್ಟೊಂದು ಹಣವನ್ನು, ನನಗೆ ಪಿಂಚಣಿ ಒಟ್ಟಿಗೆ ಬಂತು ಅದರಲ್ಲೇ ಹೋಗಿ ಬಂದೆ. ಒಟ್ಟಿನಲ್ಲಿ ಕಾಶಿಯಾತ್ರೆ ಚೆನ್ನಾಗಿಯೇ ಆಯಿತು.

'ಪಿಂಚಣಿ' ನಿಮಗ್ಯಾವ ಪಿಂಚಣಿ. ನೀವೇನಾದರೂ ಕೆಲಸದಲ್ಲಿದ್ದಿರಾ ? ಸದ್ಯ ನಾನು ಕೆಲಸ ಮಾಡುವಂತಿದ್ದರೆ ಈಗ್ಯಾತೆ ಸೊಸೆ ಕೈಕೆಳಗೆ ಬೀಳುತ್ತಿದ್ದೆ. ನಮ್ಮ ಯಜಮಾನರು ತೆಗೆದು ಕೊಳ್ಳುತ್ತಿದ್ದ ಪಿಂಚಣಿಯನ್ನು ನಾನು ತೆಗೆದು ಕೊಳ್ಳುತ್ತಿದ್ದೇನೆ. ನಿಮ್ಮ ಯಜಮಾನರೂ ಪಿಂಚಣಿ ತೆಗೆದು ಕೊಳ್ಳುತ್ತಿದ್ದರಲ್ಲಾ ನಿಮಗೂ ಬರತ್ತೆ ಪಿಂಚಣಿ ನೀವ್ಯಾಕೆ ಹೀಗ್ಗೆ ಸುಮನೆ ಕುಳಿತಿದ್ದೀರಿ. ನಿಮಗೆ ಇದರ ವಿಚಾರನೇ ಗೊತ್ತಿಲ್ಲವೇ. ?

ಹೌದೇ ? ಹಾಗಾದರೆ ನನಗೂ ಬರತ್ತಾ ಪಿಂಚಣಿ ?

ನಾನೂ ಯಾತ್ರೆ ಮಾಡಬಹುದು ? ಬೇಕಾದ್ದು ಮಾಡಿಸಿಕೊಂಡು ತಿನ್ನ ಬಹುದು. ನಮ್ಮ ರಾಮುಗೆ ಈ ವಿಚಾರ ಗೊತ್ತಿಲ್ಲವೆಂದು ತೋರತ್ತೆ. ಅವನು ಬರುತ್ತಲೇ ಹೇಳುತ್ತೀನಿ. ಸದ್ಯ ನಿಮ್ಮದಯದಿಂದ ನನಗೂ ಕಾಶಿ ಯಾತ್ರೆ ಯಾದರೆ ಸಾಕು. ನನ್ನ ದಯ ಏನು ಬಂತಮ್ಮ ಇರುವ ವಿಚಾರ ಹೇಳಿದೆ ಬರಲಾ, ಮಧ್ಯಾಹ್ನದ ಬಸ್ಸಿಗೆ ಹೊರಡ ಬೇಕು ಎಂದು ಪಾತಜ್ಜಿ

ಸಂಜೆ ರಾಮು ಬರುವುನ್ನೇ ಎದುರು ನೋಡುತ್ತಿತ್ತು ಅಜ್ಜಿ ಕಾಶಿಯಾತ್ರೆಯ ಕನಸು ಕಾಣುತ್ತಾ. ಸಾಯಂಕಾಲ ಆಫೀಸಿನಿಂದ ಬಂದು ರಾಮು ಉಸ್ಸೆಂದು ಕುಳಿತ. ರಾಮುಆ ಪಾತಜ್ಜ, ಪಿಂಚಣಿ ತೆಗೆದು ಕೊಳ್ಳುತ್ತಿದೆ ಈಗ ವಿಧವೆಯರಿಗೆಲ್ಲಾ ಅವರವರ ಗಂಡಂದಿರ ಪಿಂಚಣಿ ಕೊಡುತ್ತಾರಂತೆ ನಿನಗೆ ಈ ವಿಚಾರನೇ ಗೊತ್ತಿಲ್ಲವಾ ? ನೀನಂತೂ ನನಗೆ ಕಾಶಿಯಾತ್ರೆ ಮಾಡಿಸಲಿಲ್ಲ, ನನಗೆ ಪಿಂಚಣಿ ಬರುವಂತೆ ಮಾಡು. ನಾನೇ ಹೋಗುತ್ತೀನಿ ಕಾಶಿಗೆ.

'ಅಜ್ಜಿ ನೀನು ಕಾಶಿಗೆ ಹೋಗುತ್ತೀಯಲ್ಲಾ ನನಗೊಂದು ಕಾಶೀ ಪೀತಾಂಬರ ತಂದು ಕೊಡಜ್ಜಿ. ಕೇಳಿದಳು ಮೊಮ್ಮಗಳು.

'ಪೀತಾಂಬರವಂತೆ' ದಿನಹಾಕಿಕೊಳ್ಳಲು ಷರಟೇ ಇಲ್ಲ' ಅಜ್ಜಿ ನಿನಗೆ ಪಿಂಚಣಿ ಬಂದ ತಕ್ಷಣ ನನಗೆ ಎರಡು ಷರಟಿನ ಬಟ್ಟೆ ಕೊಡಿಸಜ್ಜಿ ; ಕೇಳಿದ ಮೊಮ್ಮಗ. ಯೋಚಿಸುತ್ತಿದ್ದ ರಾಮು

ಇದೇನೂ ಅಂದ್ರೆ, ನಿಮ್ಮ ಕಾಲಲ್ಲಿ ರಕ್ತ, ಗಾಬರಿಯಿಂದ ಕೇಳಿದಳು ರಮಾ.

ಆಫೀಸ್ ನಿಂದ ನಡೆದು ಕೊಂಡು ಬಂದೆ. ಚಪ್ಪಲಿ ರಿಪೇರಿ ಮಾಡಿಕೊಡಲು ಕೇಳಿದರೆ. 'ಇನ್ನು ಇದು ರಿಪೇರಿ ಆಗಲ್ಲ ಸ್ವಾಮಿ' ಎಂದು ಬಿಟ್ಟ. 4 ತಿಂಗಳಿಂದ ಪ್ರಯತ್ನ ಪಡುತ್ತಿರುವೆ ಹೊಸ ಚಪ್ಪಲಿ ತೆಗೆದು ಕೊಳ್ಳಲು ಸಾಧ್ಯವಾಗುತ್ತಿಲ್ಲ. ಏನು ಸಂಸಾರವೋ ಇದು, ನಿಟ್ಟಸುರಿಟ್ಟ ರಾಮು.

'ಯಾಕೆ ಹಾಗೆ ಬೇಸರ ಪಟ್ಟುಕೊಳ್ಳುತೀಯಾ ರಾಮು ನನ್ನ ಪಿಂಚಣಿಯಲ್ಲಿ ನೀನು ಮೊದಲು ಚಪ್ಪಲಿ ತೆಗೆದುಕೋ, ಶಶಿಗೆ ಕಾಶಿಪೀತಾಂಬರನೂ ತರುತೀನಿ.

ಸುಮ್ಮನಿರಮ್ಮ ನಿನ್ನ ಪಿಂಚಣಿ ಬರುವುದು ಅಷ್ಟು ಸುಲಭನಾ ಇನ್ನೂ ಅರ್ಜಿನೇ ಹಾಕ್ಕಿಲ್ಲ, ಏನೇನೋ ಕನಸು ಕಾಣುತ್ತಿರುವಿ. ಒಂದು ವರ್ಷದ ಕೆಳಗೆ ಅರ್ಜಿಹಾಕಿಕೊಂಡವರದೇ ಇನ್ನೂ ಮಂಜೂರಾಗಿಲ್ಲ.

ಯಾಕೆ ಹಾಗೆ ಅಪಶಕುನ ನುಡಿಯುತ್ತೀಯೋ ರಾಮು ನಾಳೇನೇ ಅವರಿಗೆ ಪಿಂಚಣಿ ಕೊಡುವಂತೆ ಬರಿದೂ ಬಿಡು ಕಾಶಿ ಯಾತ್ರೆಗೂ ಸಿದ್ಧಮಾಡು. ಬಡಬಡಿಸಿತು ಅಜ್ಜಿ,

'ಅಜ್ಜಿ ನಿನ್ನ Photo ಕಳುಹಿಸಬೇಕು' ಶಶಿ ಹೇಳಿದಳು. ಹೌದೇನೋ ರಾಮು, ನಡಿಯೋ ಈಗಲೇ ಹೋಗಿ ಒಂದು Photo ತೆಗೆಸಿಬಿಡೋಣ, ರಮಾ, ನನ್ನ ಆ ಚೌಕಳಿ ಸೀರೆ ತೆಗೆದು ಕೊಡೇ, Photo ದಲ್ಲಿ ಅದು ಚೆನ್ನಾಗಿ ಬೀಳುತ್ತೆ.

ಅಜ್ಜಿಯ Phot ಅವಾಂತರ ನೋಡಿ ನಗುಬಂತು ಸೊಸೆ ಯಾದ ರಮಾಗೆ.

ಅಮ್ಮಾ ಈಗೆಲ್ಲಮ್ಮಾ ನಿನಗೆ Photo ತೆಗೆಸಿವುದು. ಈಗ ದುಡ್ಡೆಲ್ಲಿದೆ. ಅವನೇನು ನಿನ್ನ ಚಿಕ್ಕಪ್ಪನ ಮಗನಾ ಬಿಟ್ಟ Photo ತೆಗೆಯಲು ಫಸ್ಟ್ ಆಗಲಿ, Photo ತೆಗೆಸಿ ನಿನ್ನ Pension ಗೆ apply ಮಾಡೋಣ ಸುಮ್ಮನಿರು. ಅಸಹನೆಯಿಂದ ಹೇಳಿದ ರಾಮು.

'ಅಯ್ಯೋ ಬೆಪ್ಪೇ ನಿನಗೆ ಅಷ್ಟು ತಿಳಿಯಲ್ಲವಲ್ಲಾ. ಆ Photo ದವನಿಗೆ ಹೇಳಿದರಾಯಿತು, ಪಿಂಚಣಿ ಬಂದ ಮೇಲೆ ನಿನಗೆ ಕೊಡುತ್ತೇನೆ, ಎಂದು.

ಅಂತೂ ಅಜ್ಜಿ Photo ತೆಗೆಸಿ ತನ್ನ ಅರ್ಜಿಯನು ರವಾನಿಸಿಯೇ ಬಿಟ್ಟಿತು.

ದಿನಗಳು ಕಳೆದು ವಾರಗಳಾಯಿತು, ತಿಂಗಳುಗಳು ಉರುಳಿದರೂ ಪಿಂಚಣಿಯ ಸಮಾಚಾರವೇ ಇಲ್ಲ. 'ರಾಮು ಪಿಂಚಣಿ ಬಂತಾ' ಇದು ನಿತ್ಯದ ಹಾಡಾಯಿತು ಅಜ್ಜಿಗೆ. ನೂರಾರು ಆಸೆಯಿಟ್ಟು ಕೊಂಡು ಪಿಂಚಣಿಯನ್ನು ಎದುರು ನೋಡುತ್ತಿದ್ದ ಅಜ್ಜಿ ಹಂಬಲಸಿ, ಸೋತು ಸೊರ

ಗಿತು.

ಅಂದು ಪಾತಜ್ಜಿ ಪುನಃ ಬಂದಿತು. ಯಾಕೆ ಹೀಗಾಗಿದ್ದೀರಿ. ತುಂಬಾಸುಸ್ತಾಗಿದ್ದೀರಲ್ಲ ನಿಮ್ಮನ್ನು ನೋಡಿ ವರ್ಷವಾಗುತ್ತಾ ಬಂತಲ್ಲವೇ, ಪಿಂಚಣಿ ಬಂದಮೇಲೆ ಯಾತ್ರೆ ಜೋರಾಯಿತೆಂದು ತೋರತ್ತೆ, ವಯಸ್ಸಾದ ಮೇಲೆ ಏನು ತಡಿಯಲ್ಲಮ್ಮ........

ನನಗೆಂಥ ವಯಸ್ಸಮ್ಮಾ ಇನ್ನೂ 70 ಅಷ್ಟೆ. ಪಿಂಚಣಿ ಇನ್ನು ಬಂದಿಲ್ಲಮ್ಮಾ. ಅಸಹನೆ ಇಂದ ಚೀರಿತು ಅಜ್ಜಿ.

ಏನಂದಿರಿ ಪಿಂಚಣಿ ಇನ್ನೂ ಬಂದಿಲ್ಲವೇ ? ನೀವು ಅರ್ಜಿ ಹಾಕಿ ಆಗಲೆ ವರ್ಷದ ಮೇಲಾಯಿತಲ್ಲವೇ ? ಆ ಸುಂದರಮ್ಮ ಹಾಕಿ 4 ತಿಂಗಳಿಗೇ ಬಂದು ಬಿಟ್ಟಿತು.

ವರ್ಷದ ಮೇಲೆ 4 ತಿಂಗಳಾಯಿತು. ನನ್ನ ಕಾಶಿ ಯಾತ್ರೆಇರಲಿ ನನ್ನ ಮಗ ರಾಮು ದಿನಾ ಆಫೀಸ್ ಯಾತ್ರೆ ಮಾಡುವೇ ಚಪ್ಪಲಿ ಸವೆಯಿತೇ ಹೊರತು ಪಿಂಚಣಿಯ ದರ್ಶನವೆ ಇಲ್ಲ ಅಂದ.

ಅಜ್ಜಿ, ಸುಮ್ಮನೆ Office ಗೆ ಅಲೆದು ಪ್ರಯೋಜನವಿಲ್ಲ, ಅಲ್ಲಿರುವ ಜವಾನನಿಂದ ಹಿಡಿದು ದಿವಾನನವರೆವಿಗೂ ಸರಿಯಾಗಿ ಮಾತನಾಡಿಸಿದರೆ ಪಿಂಚಣಿ ತಕ್ಷಣ ಬರುತ್ತೆ.

ಮತ್ತೊಮ್ಮೆ ಪಿಂಚಣಿಯ ಆಸೆ ಮರುಕಳಿಸಿತು ಅಜ್ಜಿಯಲ್ಲಿ. ಮಗ, ಸೊಸೆ. ಮೊಮ್ಮಕ್ಕಳಿಗೆ ಪಿಂಚಣಿಯ ವಿಚಾರದಲ್ಲಿ ಒಂದು ವಿಧವಾದ ಜುಗುಪ್ಸೆ ಯುಂಟಾಯಿತು. 'ರಾಮು ಪಿಂಚಣಿ ಬರ ಬೇಕಾದರೆ ಆಫೀಸ್ ನಲ್ಲಿ ಎಲ್ಲಿರನ್ನು ಸರಿಯಾಗಿ ಮಾತನಾಡಿಸಬೇಕಂತಪ್ಪಾ'.

'ಅಮ್ಮಾ ನಿನಗೇನು ಗೊತ್ತು ಅಲ್ಲಿಯ ವಿಚಾರ ಅವರನ್ನು ಮಾತನಾಡಿಸ ಬೇಕಾದರೆ ಅವರುದ್ದಕ್ಕೂ ದುಡ್ಡು ಸುರಿಯಬೇಕು' 'ಮಾತಿಗೂ ದುಡ್ಡಿಗೂ ಏನೋ ಸಂಬಂಧ. ನೀನೊಬ್ಬಕೈಲಾಗದವನು' ಮಗನನ್ನು ಗದರಿದರು.

'ನಿನಗೆ ಹೇಗೆ ಹೇಳಲಮ್ಮ ಬಂದಾಗ ಬರಲಿ ಬಿಡು ಬೇಸರದಿಂದ ಹೇಳಿದ ರಾಮು.

ಅಜ್ಜಿಯ ನಿಶ್ಶಕ್ತತೆ ದಿನೇ ದಿನೇ ಹೆಚ್ಚುತ್ತಿತ್ತು.

ಆಹಾರವನ್ನೂ ಸರಿಯಾಗಿ ತೆಗೆದು ಕೊಳ್ಳುತ್ತಿರಲಿಲ್ಲ. ರಾಮು ಡಾಕ್ಟರನ್ನು ಕರೆದು ಕೊಂಡು ಬಂದ. ಅಜ್ಜಿ ನಿಧಾನವಾಗಿ ಕಣ್ಣು ಬಿಟ್ಟು ಕೇಳಿತು. 'ಪಿಂಚಣಿ ಕೊಡುವವರು ನೀವೇನಾ? ರಾಮು ಇವರನ್ನು ಸರಿಯಾಗಿ ಮಾತನಾಡಿಸಪ್ಪ.

'ದಿಗ್ಭ್ರಾಂತರಾದರು' ಡಾಕ್ಟರು. ಪಿಂಚಣಿಯ ಕಥೆ ವಿವರಿಸಿದ ರಾಮು ಅರ್ಥವಾದ ಡಾಕ್ಟರು ಹೇಳಿದರು.

'ಹೌದಜ್ಜಿ ಇನ್ನು ಕೊಂಚದಿನದಲ್ಲೇ ನಿಮ್ಮ ಪಿಂಚಣಿ ಹಣ ಬರುತ್ತೆ ಧೈರ್ಯವಾಗಿರಿ.

ಅಮ್ಮನ ಆಸೆ ಪೂರೈಸಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದ ರಾಮು. 200 ರೂಪಾಯಿ ಅವನು ಜೋಡಿಸಬೇಕಾಗಿತ್ತು 'ಅಣ್ಣ ನನಗೆ ಈಸಲ ಸ್ಕಾಲರ್‌ಷಿಪ್ ದೊರೆತಿದೆ. ಒಟ್ಟಿಗೆ 300 ರೂಪಾಯಿ ಬರುತ್ತೆ. ನಾಳೆ ಕೊಡುತ್ತೀನೆಂದು ಹೇಳಿದ್ದಾರೆ. ಅದರಿಂದ ಅಜ್ಜಿಯ ಪಿಂಚಣಿಯನ್ನು ಮಂಜೂರು ಮಾಡಿಸಬೇಕೆಂದು ನಿರ್ಧರಿಸಿ, ಮಾರನೆಯ ದಿನ ಮಗ ಸ್ಕಾಲರ್‌ಷಿಪ್ ಹಣ ತರುವುದನೇ ಎದುರು ನೋಡುತ್ತಿದ್ದ.

ಕುಣಿದು ಕುಪ್ಪಳಿಸಿ ಕೊಂಡು ಬರಬೇಕಾಗಿದ್ದ ಮಗ ಜೋಲು ಮುಖದೊಂದಿಗೆ ಬರುತ್ತಿರುವುದನ್ನು ನೋಡಿ ರಾಮುಗೆ ಆಶ್ಚರ್ಯ ವಾಯಿತು.

'ಅಣ್ಣ, ನನ್ನ ಕೈಗೆ 250 ಮಾತ್ರ ಕೊಟ್ಟರು. ಉಳಿ 50 ಹೆಡಮಾಸ್ತರಿಗೆ ಕೊಡಬೇಕಂತೆ. ಇಲ್ಲದಿದರೆ ನನಗೆ ಹಣ ಕೈಗೆ ಬರಲು ಇನ್ನೂ ಒಂದು ತಿಂಗಳಾಗತ್ತೆ ಅಂದರು. ಅಜ್ಜಿಯ ಪಿಂಚಣಿ ತರಬೇಕಲ್ಲಾ ಎಂದು ನಾನು 250 ನ್ನು ತೆಗೆದು ಕೊಂಡುಬಂದೆ' ಅಳುತ್ತಾ ಹೇಳಿದ ರಾಮು.

ಪುನಃ ಪಿಂಚಣಿ ಆಸೆ ಚಿಗುರಿತು ಅಜ್ಜಿಯಲ್ಲಿ. ಮತ್ತೆ ಚೇತರಿಸಿಕೊಳ್ಳುತಿತ್ತು 'ಅಜ್ಜಿ'.

ಮಾರನೆಯ ದಿನ ರಾಮು Office ಗೆ ಹೊರಟಾಗ ಒಂದು ದೊಡ್ಡ ಲಕೋಟೆ ಅಜ್ಜಿಯ ಹೆಸರಿಗೆ ಬಂತು ಆಶ್ಚರ್ಯದಿಂದ ತೆಗೆದ ರಾಮು. Pension Papers

(12 ನೇ ಪುಟನೋಡಿ)

"ಸತ್ಯಾನ್ವೇಷಣೆ"

ಪವಾಡಗಳು ಅಂದು ರಕ್ಷಣೆಗೊಳಗಾಗಿದ್ದರೆ, ಇಂದು ಭಕ್ಷಣೆಗೊಳಗಾಗಿವೆ.

—ಕಾಂತಾಚಾರ್ಯಜೋಶಿ.

ಎಲ್ಲಿಕೇಳಿದರೆಲ್ಲಿ, ಎಲ್ಲಿನೋಡಿದರೆಲ್ಲಿ, ಪವಾಡಗಳ, ಸುದ್ದಿಯ ಸುಗ್ಗಿಯೇ ಸುಗ್ಗಿ, ಹಾವಳಿಯೆಹಾವಳಿ-ಭಸ್ಮಲೇಪನದವನೊಬ್ಬ, ಜಟಾಧಾರಿ ಕಂಠೇಭುಜಗಪತಿಹಾರಿಯುವನೊಬ್ಬ, ಹಿಪ್ಪಿಯವನೊಬ್ಬ, ಕ್ರಾಪಿನವನೊಬ್ಬ, ವಿಶ್ವಚಿಂತನೆಯೇ ತನ್ನ ಗುರಿಯೆಂಬುವನೊಬ್ಬ, ಆಕ್ಷತಿ ಅಂಗಾರದ ಭವ್ಯನಾಮದ ಉದ್ದಚಂಡಿಕೆಯವನೊಬ್ಬ, ಇತ್ಯಾದಿ ಪವಾಡ ಪುರುಷರಾಗಿ, ದೇಶದಪರಿಸ್ಥಿತಿ, ಹದಗೆಟ್ಟಿದೆಂದು ಹೇಳಲು ಬಹಳೇ ವಿಷಾದವೆನಿಸುತ್ತದೆ.

ಪವಾಡಗಳು :— ಇಂದ್ರಜಾಲ, ಮಹೇಂದ್ರ ಜಾಲ, ಪರಕಾಯ ಪ್ರವೇಶ, ನೀರಿನಮೇಲೆ ನಡೆಯೋಣ, ಜಲಸ್ಥಂಭನ, ಉಚ್ಚಾಟನ, ಹುಗಿದುಕೊಂಡು ಕೂಡುವುದು, ಮದ್ದು, ಮಾಟ, ಮಾಯ, ಮಂತ್ರ ತಂತ್ರ ಭೂತ ಚೇಷ್ಟೆ ಇತ್ಯಾದಿ ವಿದ್ಯೆಗಳು, ಹಿಂದು, ಇಂದು, ಮುಂದು. ಎಂದೆಂದೂ, ಇರುವವೇ, ಆದರೆ ಇವುಗಳ ದುರುಪಯೋಗ ಮಾತ್ರ ಈಗ ಹೆಚ್ಚಾಗಿವೆ.

ಮಂತ್ರಾಕ್ಷತೆ, ಹೂವು, ಹಣ್ಣು, ಕಾಯಿ ಉಂಗುರ ವಾಚ್ ಭಸ್ಮತರಿಸುವದು, ಹಣದ್ವಿಗುಣಿತ ಮಾಡುವುದು ಐಚ್ಛಿತ ಪದಾರ್ಥಗಳು ಇತ್ಯಾದಿ, ಸಹಜಸಾಮಾನ್ಯವಾಗಿವೆ. ಇವೆಲ್ಲ ಕೇವಲ ಕಂಣ್ಕಟ್ಟು, ಕೈಚಳಕ, ಮೋಸ, ಮಾಯವಲ್ಲದೇ ಬೇರೊಂದಿಲ್ಲ ಎಂಬುವದನ್ನು ಜನರೀಗ ಅರಿತು ಕೊಳ್ಳುತ್ತಿದ್ದಾರೆ.

ಸ್ವಾರ್ಥಿಗಳು, ಧರ್ಮಕರ್ಮಬಾಹಿರರು, ಆಸುರೀ ವೃತ್ತಿವುಳ್ಳವರು, ಆಧರ್ಮಾರ್ಥಸಿದ್ಧಿಗಳನ್ನು ಪಡೆದ, ಅಪರಿಪಕ್ವ ಕ,ಯೋಗಿಗಳು, ಕೇವಲ ಪ್ರಚಾರಕ್ಕಾಗಿ ಪ್ರಸಿದ್ಧಿಗಾಗಿ. ಜನರನ್ನು ವಂಚಿಸಿ, ನಂಬಿ, ನಂಬಿಸಿ, ಕಣ್ಣುಮುಚ್ಚಾಲೆ ಆಟವಾಡಿ, ಹಣಸುರಿದು ಪವಾಡಗಳ ಪ್ರದರ್ಶನ ಮಾಡುವ, ರಾಕ್ಷಸೀಮಹತ್ವಾಕಾಂಕ್ಷೆಯ ಆಸುರೀ ವೃತ್ತಿಯ ಹವ್ಯಾಸ, ಹಾಗೂ ವೈಶಿಷ್ಟ್ಯ, ಈಗಿನ ಕೆಲ ಪವಾಡಪುರುಷರದಾಗಿದೆಯೆಂದು ಹೇಳಿದರೆ, ಅತಿಶಯೋಕ್ತಿ ಆಗಲಾರದು.

ಇನ್ನೊಂದು ತುಂಬಾ ವಿಷಾದದ ಸಂಗತಿಯೇನಂದರೆ, ಬುದ್ಧಿಜೀವಿಗಳು, ಪದವೀಧರರು, ಪ್ರತಿಷ್ಠಿತರು, ಇನ್ನಿತರರು, ಇವರನ್ನೇ ಎತ್ತಿಹಿಡಿದು ಬಾಯಿತುಂಬಹೊಗಳಿ, ನಂಬಿಸಿ ಉಘೋ, ಉಘೋಎನ್ನುವ ವ್ಯಕ್ತಿಗಳಿಗೆ ಯಾವ ವಿಶ್ಲೇಷಣ ಕೊಡಬೇಕೆಂಬುದೇ ತಿಳಿಯದಾಗಿದೆ,

ಇಂದಿನ ಪವಾಡಿಗರಲ್ಲಿ ನನ್ನ ಅತ್ಯಂತ ಕಳಕಳಿಯ, ತುಂಬು ಹೃದಯದ, ಪ್ರಾಥನೆ ಏನಂದರೆ. ಎಲ್ಲ ಪವಾಡಿಗರು ಒಂದಾಗಿ ತಮ್ಮ ಹರಿತ, ಹಣ್ಣಾದ, ತಪಶ್ಚರ್ಯ ಯೋಗದಿಂದ ಕೂಡಿದ ಸಿದ್ಧಿಪಡೆದ ಮಹಿಮೆಯನ್ನು, ದೇಶದಶಾಂತಿಗೋಸ್ಕರವಾಗಿ ಪ್ರದರ್ಶಿಸಿರಿ, ದುರ್ಭಿಕ್ಷೆಯನ್ನು ಹೊಡೆದೋಡಿಸಿರಿ. ದುಃಖ, ದುಮ್ಮಾನ, ಆಪತ್ತು, ವಿಪತ್ತುಗಳನ್ನು ಕಳೆಯಿರಿ, ಜನತೆಯ ಹಿತಕ್ಕಾಗಿ, ರಾಷ್ಟ್ರದಉನ್ನತಿಗಾಗಿ ಉಗಯೋಗಿಸಿರಿ, ಆಸುರೀ ವೃತ್ತಿಯನ್ನು ನೀಗಿಸಿರಿ, ದೀನ, ದಲಿತರ, ನಾನಾ ಜನ ಶುಶ್ರೂಷವೇ ಮುಖ್ಯಗುರಿಯಾಗಲಿ. ಅಂದರೇನೇ ನಿಮ್ಮ ಅಮಲಕೀರ್ತಿಯು ದಿಕ್ ದಿಗಂತವಾಗುವುದು. ಪರಮಾತ್ಮ ಮೆಚ್ಚಿದರೆ, ಜನ ಮೆಚ್ಚುವರು

ಹಿಂದಕ್ಕೆ ವೇದಾಂತ ಸಾಮ್ರಾಜ್ಯಾಭಿಷಿಕ್ತರಾದ ಯತಿ ಚಕ್ರವರ್ತಿಗಳು, ಕೇವಲ ವಿಶ್ವಕಲ್ಯಾಣಕ್ಕಾಗಿಯೇ

ಕ್ಷಾಮ ಪರಿಹರಿಸಿದರು, ಚಿನ್ನದ ಮಳೆ ಸುರಿಸಿದರು ಕುಹಯೋಗ ಕಳೆದರು, ಸತ್ತವರ ಜೀವದಾನ ಮಾಡಿದರು. ಚೇಷ್ಟೆಮಾಡಿದ ಕುಹಕರಿಗೆ ಯೋಗ್ಯ ಶಿಕ್ಷೆ ವಿಧಿಸಿ ಉದ್ಧಾರ ಮಾಡಿದರು, ರೋಗಾರ್ತರಾಗಿ, ಸಂಸಾರ ತಾಪತ್ರಯಕ್ಕಾಗಿ, ಮಾನಸಿಕ ಶಾಂತಿಗಾಗಿ, ಪುತ್ರಾರ್ಥಿಗಳಾಗಿ ಬಂದವರಿಗೆ ಅಭಯ ನೀಡಿ ಅಭೀಷ್ಟೆಪೂರೈಸಿದರು. ಹೀಗೆ ಒಂದಲ್ಲ ಎರಡಲ್ಲ, ಲೆಕ್ಕವಿಲ್ಲದಷ್ಟು ಅಪಾರ ಮಹಿಮೆಗಳನ್ನು ಪ್ರದರ್ಶಿಸಿದರು. ಆಸುರೀ ಸಂಪತ್ತನ್ನು ನಿವಾರಿಸಿ, ದೈವೀಸಂಪತ್ತನ್ನು ಸ್ಥಾಪಿಸಿದರು. ಕೇವಲ ವಿಶ್ವಕಲ್ಯಾಣಕ್ಕಾಗಿ, ನಿಸ್ವಾರ್ಥಿಗಳಾಗಿ, ಜಗತ್ತಿನ ದುಃಕಕ್ಕಾಗಿ. ಹೃದಯಬೆಂದು, ಮನನೊಂದು, ಅಂತಃಕರಣ ಕದಡಿ ಕರಗಿ ಆರ್ತಿಗಳ ಸಕಲ ಅಭೀಷ್ಟೆಗಳನ್ನು ಪೂರೈಸಿ, ವಿಶ್ವವಂದ್ಯರಾಗಿ, ವಿಶ್ವಮಾನ್ಯರಾದರು. ಕಾಲ ಗತಿಸಿದರೂ ಅವರ ಅಮರ ಕೀರ್ತಿ ಕಂದಿಲ್ಲ, ಕುಗ್ಗಿಲ್ಲ, ತಗ್ಗಿಲ್ಲ ಹಚ್ಚಹಸುರಾಗಿ ಉಳಿದಿದೆ.

ಯೋಗತಪಶ್ಚರ್ಯದಿಂದ ಕೂಡಿದ ಸಾತ್ವಿತ, ನಿಸ್ವಾರ್ಥ ಪ್ರಾಮಾಣಿಕ ಪವಾಡಗಳಿಗೆ ಸದಾಸರ್ವದಾ ಗೌರವವಿದೆ. ಅಭಿಮಾನವಿದೆ, ಆದರವಿದೆ, ಪುರಸ್ಕಾರವಿದೆ.

ಈ ಸಂದರ್ಭದಲ್ಲಿ ಜನತೆ ಸಾತ್ವಿಕ, ರಾಜಸ ತಾಮಸ ಪವಾಡಗಳ ಸತ್ಯಾನ್ವೇಷಣೆಮಾಡಿ ಮುನ್ನಡೆಯುವದು ಸೂಕ್ತವೆನಿಸುತ್ತದೆ. ಅನೇಕ ತಲೆಮಾರುಗಳಿಂದ ನಡೆದು ಬಂದ ಸತ್ಯಾನ್ವೇಷಣೆ ಮುಂದುವರೆಯಲಿ.

(10 ನೇ ಪುಟದಿಂದ)

ಎಲ್ಲಾ ವಾಪಸ್ಸುಬಂದಿತ್ತು. ಕಾರಣ ಅಜ್ಜಿಯ ರುಜು ಮೂರು ಕಡೆ ಆಗ ಬೇಕಿತ್ತು ಆದರೆ ಅಜ್ಜಿ ನಾಲ್ಕು ಕಡೆ ಮಾಡಿತ್ತು !

ಎಲ್ಲಾವನ್ನು ಹಿಡಿದು ಕೊಂಡು ಉಳಿದ 50 ರೂ ನೊಂದಿಗೆ ಗುಮಾಸ್ತನನ್ನು ಮಾತನಾಡಿಸಲು Office ಗೆ ಓಡಿದ ರಾಮು.

ಇಂದು ಗುರುವಾರ, ಅಜ್ಜಿ ಎಷ್ಟೊ ಗೆಲುವಾಗಿದೆ ಯಾತ್ರೆಗೆ ಎಲ್ಲಾ ಸಿದ್ಧಮಾಡಿಕೊಳ್ಳುತ್ತಿತ್ತು.

ಅಮ್ಮಾ ಅಮ್ಮಾ, ನಿನ್ನ ಪಿಂಚಣಿ ಮಂಜೂರಾಗಿದೆ, ಒಟ್ಟಿಗೆ 900 ಬರುತ್ತೆ. ತಿಂಗಳಿಗೆ 70 ಬರುತ್ತೆ ಕೂಗಿದ ರಾಮು, ಕೈಯಲ್ಲಿರುವ ಕಾಗದ ಮಡಿಸುತ್ತ. 'ಅಜ್ಜಿ ನನಗೆಕಾಶಿ ಪೀತಾಂಬರ' ಕಿರಿಚಿದಳು ಶಶಿ 'ಅಜ್ಜಿನನಗೆ ಹೊಸಾ ಪರಟು' ಕೂಗಿದ ರವಿ. 'ರಾಮು, ಬಂತಾ ಪಿಂಚಣಿ ಯಾತ್ರೆಗೆ ಸಿದ್ಧಮಾಡಿದ್ದ ಘಟ್ಟಿಯಾಗಿ ಒಂದೇ ಉಸುರಿಗೆ ಕೇಳಿ ಹಿಂದಕ್ಕೆ ಒರಗಿತು ಅಜ್ಜಿ !

ಅತೀವ ಸಂತೋಷವನ್ನು ತಾಳಲಾರದೆ, ಬದುಕಿನ ಬವಣೆಗಳನ್ನೆಲ್ಲಾ ತೊರೆದು ದೀರ್ಘಯಾತ್ರೆಗೆ ಹೊಟತ್ತು ಅಜ್ಜಿ ! ||

ವಿಚಿತ್ರ ಗಡಿಯಾರ

ಜೆಕೊಸ್ಲಾವಾಕಿಯಾದ ರಾಜಧಾನಿ ಪ್ರಾಗ್. ಈ ಪಟ್ಟಣದ ಪುರಭವನದ ಮೇಲೆ ಒಂದು ದೊಡ್ಡಗಡಿಯಾರವಿದೆ. ಅದಕ್ಕೆ ಎರಡು ಮುಖಗಳು.

ಒಂದು ಮುಖದ ಮೇಲಿನ ಮುಳ್ಳುಗಳು ಸೂರ್ಯ ಮತ್ತು ಆಕಾಶದಲ್ಲಿನ ಇತರ ಮುಖ್ಯ ಗ್ರಹಗಳ ಪಥವನ್ನು ತೋರಿಸುತ್ತವೆ. ಇನ್ನೊಂದು ಮುಖ ಕ್ಯಾಲೆಂಡರ್. ಇದರ ಮಧ್ಯೆ ಹಳೆಯ ಊರಿನ ಸಂಕೇತವಿದೆ.

—ಎಚ್. ಗವಿಸಿದ್ದಯ್ಯ

ನೀಮಾಡಿದ ತೋಟ

ತನುವೆಂಬ ತೋಟದಲಿ, ಮನವೆಂಬ ಮಡಕೆಗೆ
ಶಮ—ದಮ ಎಂದೆಂಬೆರಡು ಎತ್ತುಗಳ ಹೂಡಿ
ಅಹಂತಾ—ಮಮತಾದಿಗಳೆಂಬ ಕಳೆಯ ಕಿತ್ತೊಗೆದು
ಭಕ್ತಿ ಯೆಂದೆಂಬ ಬೀಜವನೆ ಬಿತ್ತಿ
ನಿತ್ಯ ಎಂದೆಂಬ ಬೆಳೆಯನೆ ಬೆಳೆದು.
ಮುಕ್ತಿಯೆಂದೆಂಬ, ಫಲವನೆ ಫಲಿಸುಂಡ
ನೀ ಮಾಡಿದ ತೋಟವು ಸ್ಥಿರವಹುದು
ನೋಡಾ ಸಿದ್ಧಲಿಂಗೇಶ್ವರ.

— ಶಿವಶರಣಪ್ಪ

ಗಮಕದ ಗುರಿಯೇನು?

— ಎಂ. ಜಿ. ವೆಂಕಟೇಶಯ್ಯ

Yet in a single flash
The innerself may gaze upon his face – Aziz Darvesh (The way of the Swan)

ಮೇಲಿನ ಪ್ರಶ್ನೆಯ ಉತ್ತರದ ವಿವರಣೆಗಾಗಿ ಕೆಲವು ಅನುಭವಗಳನ್ನು ವಾಚಕರ ಮುಂದಿಡಲು ಬಯಸುತ್ತೇನೆ.

ಅನುಭವಕ್ಕೆ ನಿಜವು ಅನೇಕವೇಳೆ ಚೆನ್ನಾಗಿ ಗೋಚರವಾಗುತ್ತದೆ. Experience elicits truth.

ನನಗೆ ಪರಮಪಾತ್ರರೂ ಮಾನ್ಯರೂ ಆದಗಿರಿಜಯ್ಯನವರು (ಅವರ ನಿಜವಾದ ಹೆಸರು ಅದಲ್ಲ) ಶ್ರೇಷ್ಠಗಮಕಿಗಳು. ಸಂಗೀತಶಾಸ್ತ್ರನಿಪುಣರು. ಹಿಂದೆ, ಪರಿಚಯವಾದ ಘಳಿಕೆಯಲ್ಲಿಯೇ ಅವರು ನನಗೆ ಹೀಗೆ ಹೇಳಿದರು "ನಾನು ಸಂಗೀತಗಾರನಲ್ಲ, ಮೇಧಾವಿಯೂ ಅಲ್ಲ, ಕನ್ನಡ ಪಂಡಿತನೂ ಅಲ್ಲ, ಮಹಾಪುರುಷನಂತು ಅಲ್ಲವೇ ಅಲ್ಲ" Also ran, ಎಂಬೋ ಪೈಕಿ. ಕಾವ್ಯವಾಚನಮಾಡುವರೀತಿಯನ್ನು ನಮ್ಮ ಗುರುಗಳು (ಅವರು ಪಿಟೀಲನ್ನು ಬಾರಿಸುತ್ತಿದ್ದರು) ನನಗೆ ಕಿವಿ ಹಿಂಡಿ ಕಲಿಸಿದರು. ಅವರು ಹೇಳಿದ ಮಾತು ಈಗಲೂ ನೆನಪಿದೆ–ಅಯ್ಯಾ, ನಿನ್ನ ಕಾವ್ಯವಾಚನವು ಶ್ರೋತೃಗಳಿಗೆ ಹಿತವಾಗಿರಬೇಕು. ಅದರಂತೆ ನಾನು ವಾಚನಮಾಡಲು ಪ್ರಯತ್ನ ಪಡುತ್ತೇನೆ. ಫಲಿತಾಂಶ ನನ್ನದಲ್ಲ. ಇದು ಹೃಷೀಕೇಶನಮಾತು. ಇನ್ನು—ನೀವು ಸಿಕ್ಕ ಸಿಕ್ಕ ಪ್ರಶ್ನೆಹಾಕಬೇಡಿ. ನನ್ನ ಬಳಿ ಅವುಗಳಿಗೆ ಉತ್ತರವಿಲ್ಲ. ಒಂದು ಸಭೆಯಲ್ಲಿ ಕುಂದು ಕೊರತೆ ಕಾಣಬಹುದು ; ಮತ್ತೊಂದು ಸಭೆಯಲ್ಲಿ ಆ ಕೊರತೆ ಕಾಣಬಹುದು."

ಇದರ ಅನುಭವ ಕಾಲ ಕ್ರಮೇಣ ನನಗೆ ಬಂತು.

ಕುತೂಹಲವು ಮಾನವನ ಒಂದು ಸಹಜ ಪ್ರಕೃತಿ ಆದರೆ ಆತುರಗಾರನಿಗೆ ಯಾವ ಸುಖವೂ ಬೇಗನೆಸಿಗಲಾರದು. ಪಾಂಡಿತ್ಯಕ್ಕಿಂತಲೂ ಈ ವಿಚಾರದಲ್ಲಿ ಅನುಭವಕ್ಕೆ ಹೆಚ್ಚಿನ ಬೆಲೆ ವೈದ್ಯನಿಗಿಂತಲೂ ಹಳೇ ರೋಗಿ ವಾಸಿ ಅಂತಾರಲ್ಲ, ಹಾಗೆ !

ಮನೋರಂಜನೆಯಾಗದಿದ್ದರೆ ವಾಚನವನ್ನು ಕೇಳುತ್ತಾ ಯಾರು ತಾನೆ ಕುಳಿತಿರುತ್ತಾರೆ ? ಆದ್ದರಿಂದ ಕಾವ್ಯಗಾಯನ ಎಷ್ಟೇ ಪಾಂಡಿತ್ಯದಿಂದಕೂಡಿದ್ದರೂ ಅದು ಶ್ರೋತೃಗಳಿಗೆ ಇಂಪಾಗಿರ ಬೇಕು ; ಅದರಲ್ಲಿಮನೋರಂಜನೆಯೂ ಇರಬೇಕಾದುದು ಅಗತ್ಯ.

ಶ್ರುತಿಪೆಟ್ಟಿಗೆ, ತಂಬೂರಿ, ಇವೆರಡನ್ನೂ ಶ್ರೀಯುತರು ಸಮಯಾನುಸಾರ ಉಪಯೋಗಿಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಶ್ರೀಯುತರ ಕಾವ್ಯವಾಚನ ಬಹು ಇಷ್ಟ. ಶ್ರೀಯುತರ ಬಾಯಿಂದ ಕುಮಾರವ್ಯಾಸ ಭಾರತದ ಪದ್ಯಗಳನ್ನು ಕೇಳಬೇಕೆಂದು ಅವರು ಆಗಾಗ ಕರೆಯುತ್ತಿದ್ದರು. ಅಂಥಾಸಭೆಗಳಿಗೆ ಹೋದಾಗ ಅವರು ಶ್ರುತಿಪೆಟ್ಟಿಗೆಯನ್ನು ತೆಗೆದುಕೊಂಡು ಹೋಗುತ್ತಿದ್ದರು.

ಇತಿವೃತ್ತ (ಕತೆ) ನಿರೂಪಣೆಯೇ ಅಂಥಾ ಸಭೆಗಳಲ್ಲಿ ಗಿರಿಜಯ್ಯನವರ ವಾಚನದ ಮುಖ್ಯಗುರಿ.

ಅವರು ಹೇಗೆ ವಾಚನ ಮಾಡುತ್ತಿದ್ದರು, ಎಂಬುದಕ್ಕೆ ಒಂದು ಉದಾಹರಣೆಯನ್ನು ಇಲ್ಲಿಕೊಡುತ್ತೇನೆ.

ಒಂದು ಹೈಸ್ಕೂಲು ; ವಿದ್ಯಾರ್ಥಿಗಳ ಸಭೆ. ಕನ್ನಡ, ಸಂಸ್ಕೃತ, ತಮಿಳು ಭಾಷೆಗಳ ಪಂಡಿತರೂ ಸಭೆಯಲ್ಲಿದ್ದರು. ಮುಖ್ಯೋಪಾಧ್ಯಾಯರು ತಮಿಳರು. ಆದರೆ ಕನ್ನಡ ಅವರಿಗೆ ತಿಳಿಯುತ್ತಿತ್ತು.

ಗಿರಿಜಯ್ಯನವರು ಕುಮಾರವ್ಯಾಸ ಭಾರತದಲ್ಲಿನ ವಿರಾಟಪರ್ವದ ಪದ್ಯಗಳನ್ನು ಆರಿಸಿಕೊಂಡರು. ಹತ್ತು ಪದ್ಯಗಳಷ್ಟುವಾಚನ ನಡೆಯಿತು. ಆಮೇಲೆ ರಾಗವಾಗಿ ನುಡಿಯುತ್ತಾ.... ಆರೊಡನೆಕಾದುವೆನು ! ....ಕೆಲಬರು ಹಾರುವರು (ದ್ರೋಣಕೃಪಅಶ್ವತ್ಥಾಮರು) ಕೆಲರು ಅಂತ

ಕನ ನೆರೆಯೂರವರು (ಭೀಷ್ಮರು!; ವೃದ್ಧರು....ಇವತ್ತೋ ನಾಳೆಯೋ....) ಕೆಲರು ಅಧಮಕುಲದಲಿ ಸಂದುಬಂದವರು (ಕರ್ಣ....) ಇಷ್ಟನ್ನುರಾಗವಾಗಿ ಹೇಳಿ, ಶ್ರುತಿಯನ್ನು ಸಣ್ಣಗೆ ಮಾಡಿ, ವೀರರೆಂಬುವರಿವರು !!, ಎಂದು ಗದ್ಯದಹಾಗೆ, ಅಪಹಾಸ್ಯದ ದನಿ ಬೆರಸಿ ನುಡಿದು,..... ಪುನಃ ರಾಗಪೂರಿತವಾಗಿ.

.........ಮೇಲಿ । ನ್ನಾರಹೆಸರುಂಟು ಅವರೊಳು .... ಎಂದು, ಕುಮಾರನೆಣಗೊಬ್ಬಿನಲಿ ನುಡಿದನು.........

ಶ್ರುತಿಯನ್ನು ಪೂರ್ತಿಯಾಗಿ ನಿಲ್ಲಿಸಿಬಿಟ್ಟರು ಒಂದೆರಡು ಸೆಕೆಂಡುಗಳತರುವಾಯ, ಊಟಕ್ಕೆ ತುಪ್ಪವನು ಬಡಿಸುವಂತೆ.... ಹೆಂಗಳಿದಿರಿನಲ್ಲ !! ಎಂದು ಚೂಬಾಣ ಬಿಟ್ಟರು, ರಾಗಪೂರಿತವಾದ ತಮ್ಮ ಅಣಕು ಧ್ವನಿಯಲ್ಲಿ. ಸಭೆಘೊಳ್ಳೆಂತು !

ಈರೀತಿಯಾಗಿ ಅವರು ಅನೇಕಕಡೆ ಶ್ರುತಿ ಕಡಿಮೆಯಾಗಿಯೋ ಅಥವಾ ಪೂರ್ತಿಯಾಗಿನಿಲ್ಲಿಸಿಯೋ ಕವಿಯ ಮರ್ಯಾದಮಾತುಗಳಿಂದ ಸಭಿಕರಿಗೆ ಕವಿಯ ಮನೋಗತವನ್ನು ತಿಳಿಸುತ್ತಿದ್ದರು. ಹೀಗೆ ಕಾವ್ಯದಲ್ಲಿನ ಚಮತ್ಕಾರ ಸಭಿಕರಿಗೆ ತಿಳಿಸುವುದು ಕೇವಲ ಪಾಂಡಿತ್ಯದಿಂದ ಬರುವುದಲ್ಲ — ಇತಿವೃತ್ತನಿರೂಪಣೆ.

ಈ ರೀತಿಗೆ ಶಾಸ್ತ್ರೋಕ್ತವಾಗಿ ಆಕ್ಷೇಪಣೆಮಾಡಿದವರು ಇದ್ದಾರೆ. ಆದರೆ ಇದು ವಿದ್ಯಾರ್ಥಿಗಳಲ್ಲಿ ಅತ್ಯಂತಫಲಕಾರಿಯಾದುದನ್ನು ನಾನು ಕಣ್ಣಾರಕಂಡಿದ್ದೇನೆ. ಇದೊಂದು ಕಲೆ.

ನಾಟರಾಗದಿಂದಲೇ ಕಾವ್ಯವಾಚನ ಪ್ರಾರಂಭ ; ಮಧ್ಯೆ ನಮ್ಮಲ್ಲಿ ಸಾಮಾನ್ಯವಾಗಿ ಚಾಲತಿಯಲ್ಲಿರುವ ರಾಗಗಳ ಪ್ರಯೋಗ ; ಕೊನೆಯಲ್ಲಿ ಶ್ರೀರಾಗದಿಂದ ವಾಚನ ಮುಗಿಸುವುದು—ಇದು ಶ್ರೀಯುತರ ಪದ್ಧತಿ. ವಿದ್ಯಾರ್ಥಿಗಳು ಅವರ ಜೊತೆಗೆತಾವು ಗುಯ್ಯುಗುಟ್ಟುತ್ತಾ ಆನಂದ ಪಡುತ್ತಿದ್ದರು. ಇದಕ್ಕಿಂತಲೂ ಗಮಕಿಗೆ ಮತ್ತೇನು ಬೇಕು;

ಇನ್ನೊಂದು ವಿಶೇಷಅನುಭವ—

ಮೈಸೂರು ಸರ್ಕಾರವು ಸಂಸ್ಕೃತಿ ಪ್ರಚಾರಕಾರ್ಯವನ್ನು ವಿಶೇಷರೀತಿಯಲ್ಲಿ ಕೈಗೊಂಡಿದ್ದ ಕಾಲದಲ್ಲಿ ನಡೆದವಿಚಾರವಿದು.

ತಿಮ್ಮಲಾಪುರದ ಸಭೆಗೆ ಗಿರಿಜಯ್ಯನವರೊಡನೆ ನಾನು-ಹೋಗಬೇಕಾಗಿ ಬಂದಿತು.

ಅಲ್ಲಿಗೆ ನ ವಿ ್ಬರೂ ಹೋಗಿ ತಲುಪುವುದಕ್ಕೆ ಮುಂಚಿತವಾಗಿಯೆ ಒಂದು ಸುದ್ದಿಯು ಗಿರಿಜಯ್ಯನವರ ಕಿವಿಗೆ ಬಿದ್ದಿತ್ತು–ಸುತ್ತಮುತ್ತಲಿನ ಗಮಕ ವಿದ್ವಾಂಸರು ಆ ಸಭೆಗೆ ಬರುತ್ತಾರೆಂದೂ, ಕಾವ್ಯವಾಚನವನ್ನು ಅವರು ಕಟುವಾಗಿ ಟೀಕಿಸುವುದರಲ್ಲಿ ಅಗ್ರಗಣ್ಯರೆಂದು....ತಿಳಿವರ್ಗೆ ಮತ್ಸರಂ ಪಿರಿದು....ಎಂದು ಹಿಂದೆಯೆ ಕವಿಹಾಡಿದ್ದಾನಲ್ಲ ! ವಾಕ್ಷೀಯುತನ ಮತ್ಸರಂ ಶ್ರೀಯುತನಿಗೆ ಬಂದರೆ, ಕೃತಾರ್ಥರಾಗರೆ ಕವಿಗಳ್—ಎಂದು ಕವಿ ಚಕ್ರವರ್ತಿ ರನ್ನ (ಗದಾಯುದ್ಧಂ I. ೪೬)

ಅಲ್ಲಿನ ತಹಸೀಲುದಾರರಿಗೆ ಸಾಹಿತ್ಯಸಂಗೀತಗಳಲ್ಲಿ ವಿಶ್ವಾಸ. ಅದರಲ್ಲೂ ಕುಮಾರವ್ಯಾಸ ಭಾರತದ ಪದ್ಯಗಳೆಂದರೆ ಆತನಿಗೆ ಕೇಳಲು ನಾಲ್ಕುಕಿವಿಗಳು. ಆತನದು ಉತ್ಸಾಹದಿಂದ ನಮ್ಮನ್ನು ಕೇಳಿದ—"ನಿಮಗೆ ಎಂಥಾ ವಾಹನ ?". ನಾನು ನಕ್ಕೆ ಆತನಿಗೆ ಏತಕ್ಕೆಂದು ಅರ್ಥವಾಗಲಿಲ್ಲ. "ಏಕೆನಗುತ್ತೀರಿ ?" ಎಂದ.

"ವಾಹನ ವೆಂಬಪದವನ್ನು ನಾವುಜೀವಂತವಾಗಿರುವ ಮಾನವರ ವಿಚಾರವಾಗಿ ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ, ಎಂದೆ."

ಆತನಿಗೆ ಆಗ ಅರ್ಥವಾಯಿತು. "ಕ್ಷಮಿಸಿ, ನಾನು ಬಂಡಿ ಎನ್ನಬೇಕಾಗಿತ್ತು. ಸಂಸ್ಕೃತ ಪ್ರಯೋಗ ಮಾಡಿದೆ! ಹೋಗಲಿ ಬಿಡಿ" ಈಗ ನೀವು ಅಲ್ಲಿಗೆ ಹೋಗ ಬೇಕಲ್ಲ... ಯಾವ ಬಂಡಿ ತರಿಸಲಿ ?"

"ಯಾವುದಾದರೂ ಸರಿ" ಎಂದು ನಾನು ಹೇಳುವುದರೊಳಗಾಗಿ ಗಿರಿಜಯ್ಯನವರು "ನನ್ನ ತಂಬೂರಿ ಸುರಕ್ಷಿತವಾಗಿ ಅಲ್ಲಿಗೆ ಸಾಗಬೇಕಲ್ಲ ! " ಎಂದರು.

ಈಮಾತು ನನಗೆ ಆಶ್ಚರ್ಯವನ್ನುಂಟುಮಾಡಿತು. ಶ್ರೀಯುತರು ತಂಬೂರಿಯನ್ನು ತರಬೇಕಾದರೆ, ಏನೋ ಹೆಚ್ಚಾದ ಅಗತ್ಯವಿರಬೇಕು. ಅದೇನೆಂಬುದು ಆಗ ನನಗೆ

ಗೊತ್ತಾಗಲಿಲ್ಲ. ಆಮೇಲೆ, ನನಗೆ ಅದರ ವಿಚಾರ ಚೆನ್ನಾಗಿ ತಿಳಿದು ಬಂತು.

"ವಾಚನಕ್ಕೆಯಾವುದನ್ನು ಆರಿಸಿ ಕೊಂಡಿದ್ದೀರಿ ?" ಎಂದರು ತಹಸೀಲ್ದಾರರು.

"ಕುಮಾರವ್ಯಾಸಭಾರತ, ಉದ್ಯೋಗಪರ್ವದ ಆರನೆಯ ಸಂಧಿ—ಈ ಇಪ್ಪತ್ತು ನಾಲ್ಕು ಪದ್ಯಗಳು" ಎನ್ನುತ್ತಾ ಶ್ರೀಯುತಗಿರಿಜಯ್ಯನವರು ಆ ಪದ್ಯಗಳನ್ನು ತೋರಿಸಿದರು. ತಮಗೆ ಕೊಟ್ಟಿರುವ ಕಾಲ ಪ್ರಮಾಣಕ್ಕೂ ವಾಚನಕ್ಕೂ ಸರಿಹೋಗುವುದಾಗಿ ತಿಳಿಸಿದರು.

ಕಾವ್ಯವಾಚನಜರುಗಿತು. ಸುಮಾರು ಹದಿನೆಂಟು ರಾಗಗಳು ಓಡಾಡಿದವು. ಕೆಲವು ಅಪರೂಪರಾಗಗಳು; ಒಂದೆರಡು ಹೆಸರನ್ನು ನಾನು ಆ ದಿನವೇ ಕೇಳಿದ್ದು. ಆಲ್ಲಲ್ಲಿ ಅವರು ತೋರಿಸಿದ ಚಿತ್ರ ವಿಚಿತ್ರರಾಗ ಛಾಯೆ ಅದ್ಭುತವಾಗಿತ್ತು.

ಕಾವ್ಯಗಾಯನ ಬಲು ಸೊಗಸಾಗಿತ್ತು. ಸಭೆಯನ್ನು ಅದು ಮರುಳುಮಾಡಿತು. ಶ್ರಾವ್ಯವಾಗಿದ್ದ ಆ ಗಾನವನ್ನು ಗಿರಿಜಯ್ಯನವರ ಶಾರೀರ ಸಂಪತ್ತನ್ನೂ ಎಲ್ಲರೂ ಮೆಚ್ಚಿಕೊಂಡರು. ತಹಸೀಲ್ದಾರರೂ ಭೇಷ್ ! ಭೇಷ್ !! ಎನ್ನುತ್ತಾ ತಲೆಯಲ್ಲಾಡಿಸಿದರು.

ಆದರೆ ಆ ವಾಚನವು ಕಾವ್ಯವಾಚನದ ಶ್ರೇಷ್ಠ ವಾದ ಗುರಿಯೇ ? —ಎಂಬ ಶಂಕೆ ನನ್ನಮನಸ್ಸಿನಲ್ಲುಂಟಾಯಿತು

ನಾನು ಅವರನ್ನು ಕೇಳಿಯೇಬಿಟ್ಟೆ. ಅದಕ್ಕೆ ಜವಾಬು ಬಂತು.

"ನಿಜ ಹೇಳಬೇಕಾದರೆ ಕವಿಯ ದೊಡ್ಡಸ್ಥಿಕೆಯನ್ನು ತೋರಿಸಲು ಕಾವ್ಯವಾಚನ ಮಾಡಲಿಲ್ಲ. ನನ್ನ ಪಾಂಡಿತ್ಯ ಪ್ರದರ್ಶನಕ್ಕೆ ನಾನು ಮಾಡಿದ್ದು - ಸಭಿಕರನ್ನು ತಬ್ಬಿಬ್ಬು ಮಾಡಿ, ಟೀಕಿಸಲು ಬಂದಿದ್ದ ವಿದ್ವಾಂಸರನ್ನು ಮೂಕರನ್ನಾಗಿ ಮಾಡಲು ಈ ಸಾಹಸವನ್ನು ಕೈಗೊಂಡೆ. ಇದು ಕಾವ್ಯವಾಚನದ ಗುರಿಯಲ್ಲ. ಆದರೆ ನಾನು ಅಹಂಕಾರ ಹಿತನಲ್ಲ, ಉಪ್ಪು-ಕಾರ ತಿಂದ ದೇಹ, ಇಂಥಾ ಸನ್ನಿವೇಶಗಳಲ್ಲಿ ದೊಂಬರಾಟ-ಸರ್ಕಸ್-ಮಾಡಬೇಕಾಗಿ ಬರುತ್ತದೆ. ವಾಚನದಲ್ಲಿ ಲಯವಿಶೇಷಗಳನ್ನು ತೋರಿಸಬೇಕು : Art lies between pure emotion and pure decoration, ಎಂದ ಒಬ್ಬ ವಿಮರ್ಶಕ. ವಾಚನ ಮಾಡುವಾಗಲೂ ನಿಮಿಷ ನಿಮಿಷಕ್ಕೂ ನನ್ನ ಅಹಂಕಾರವು ನನಗೆ ಗೋಚರವಾಗುತ್ತಲೇ ಇತ್ತು."

ಇನ್ನೊಂದು ಸಲ ಪ್ರಸನ್ನ ಆಂಜನೇಯನ ದೇವಸ್ಥಾನದಲ್ಲಿ G. ಎಂಬುವರ ಕಾವ್ಯವಾಚನ ಜರುಗಿತು. ಅವರು ಪಂಡಿತರು ; ಅವರು ಗಮಕಿಗಳೆಂದು ನಾನು ಕೇಳಿಯೇ ಇರಲಿಲ್ಲ. ಜೈಮಿನಿ ಭಾರತದಲ್ಲಿ ಸುಮಾರು ಮೂವತ್ತು ಪದ್ಯಗಳನ್ನು ವಾಚನ ಮಾಡಿದರು.

"ಕೇಳುವವರಿಗೇನು ಗೊತ್ತು ! ಏನು ಕೂಗಿದರೂ ಕೇಳುತ್ತಾರೆ" ಎಂಬುವ ಧೋರಣೆಯಿಂದ ಅವರು ಕಾರ್ಯ ನೆರವೇರಿಸಿದರು ಅಗ್ನಿಪರ್ವತದಿಂದ ಜ್ವಾಲೆ ಹೊಳೆಗಳು ಹೊರಟಂತೆ ಪದ್ಯಗಳು ಅವರ ಬಾಯಿಂದ ಶ್ರೋತೃಗಳ ಕಡೆಗೆ ಹೊರಟುಬಂದವು.

ಶ್ರೋತೃಗಳಿಗೆ ನಿದ್ದೆ ಮಾಡಲು ಯಾವ ಅವಕಾಶವೂ ಸಿಕ್ಕಲಿಲ್ಲ. ಕೊನೆಯ ಪದ್ಯವನ್ನು ಅವರು ಅಠಾಣದಲ್ಲಿ ಮುಗಿಸಿದಂತೆ ನನಗೆ ತೋಚಿತು. ಗಿರಿಜಯ್ಯನವರನ್ನು ಕೇಳಿದೆ. ಅವರು ನಕ್ಕು ಸುಮ್ಮನಿದ್ದರು. ಆ ರೀತಿಯಾಗಿ ಮುಗಿಸಿದ್ದನ್ನು ನಾನು ಹಿಂದೆ ಎಂದೂ ಕಾಣೆ. ಗಿರಿಜಯ್ಯನವರು ಅವರನ್ನು ಏಕಪ್ರಕಾರವಾಗಿ ಹೊಗಳಿದರು.

ಮನೆಯ ಕಡೆಗೆ ತಿರುಗಿದಾಗ ನಾನು ಆ ಹೊಗಳಿಕೆಯನ್ನು ಒಪ್ಪಲಿಲ್ಲ ; ಅವರನ್ನು ಪ್ರಶ್ನೆಮಾಡಿದೆ. "ಇಲ್ಲವಯ್ಯಾ ಆತನ ಧೈರ್ಯಕ್ಕೆ ಯಾರಾದರೂ ಮೆಚ್ಚಬೇಕಾದದ್ದೇ ಕವಿಯ ಮನೋರಥವನ್ನು ಗುಂಡಿಟ್ಟು ಹೊಡೆದ ಹಾಗೆ ಧೈರ್ಯವಾಗಿ ನುಡಿದುಬಿಟ್ಟರು. ಯಶಸ್ಸು ಪಡೆಯಬೇಕಾದರೆ ಇಂಥಾ ಧೈರ್ಯ ಬೇಕು ಆ ಸಂಪತ್ತು ಇಲ್ಲಿ ಕಡಿಮೆ !"

ಸಂಕಲ್ಪವಿಲ್ಲದೆ ಪೂಜೆಯಿಲ್ಲ ; ಗುರಿಯಿಲ್ಲದೆ ಗಮಕವಿಲ್ಲ. ಚಿತ್ರಮಂದಿರದಲ್ಲಿ ನಿಂತಂತೆ ನಿಂತು ಕಾವ್ಯವಾಚನವನ್ನು ನಮ್ಮ ಜನರು ಕೇಳುವುದು ಅಸಂಭವ. ಶೋತೃ

(25 ನೇ ಪುಟನೋಡಿ)

"ಸತ್ಯ ಮತ್ತು ಕಲ್ಯಾಣ"

ಪಂ|| ಷಣ್ಮುಖಯ್ಯ, ಅಕ್ಕೂರಮಠ.

ಸತ್ಯ ಮತ್ತು ಕಲ್ಯಾಣ ಈ ಎರಡೂ ಧರ್ಮದ ಶ್ರೇಷ್ಠ ಗುಣಗಳು. ಒಂದೇ ನಾಣ್ಯದ ಎರಡು ಮುಖಗಳು. ಧರ್ಮದ ಅವಳಿ-ಜವಳಿ ಸಂತಾನ. ಈ ಎರಡೂ ಗುಣಗಳು ಪರಸ್ಪರ ಪೂರಕವಾಗಿವೆ ಮಾರಕವಾಗಿಲ್ಲ. ಈ ಎರಡರಲ್ಲಿ ಅವಿನಾಭಾವಸಂಬಂಧವಿದೆ. ಇವುಗಳಿಂದ ವ್ಯಕ್ತಿಗೂ-ಸಮಷ್ಟಿಗೂ ಒಳಿತಾಗುತ್ತದೆ. ಜೀವನದಲ್ಲಿ ಒಂದೇ ಗುರಿ-ಒಂದೇ ಮಾರ್ಗ ಯಾರಿಗೂ ಬೇಕಿಲ್ಲ. ಅವರವರ ಕಣ್ಣಿನಂತೆ ಅವರವರ ಗುರಿ ; ಅವರವರ ಕಾಲಿನಂತೆ ಅವರವರ ದಾರಿ. ನಮ್ಮ ಪ್ರಭಾವ-ನಮ್ಮ ಗುರಿ-ನಮ್ಮ ಉದ್ದೇಶ-ಸಂಕಲ್ಪ-ಸಂದರ್ಭಗಳಂತೆ ಈ ಎರಡು ಗುಣಗಳನ್ನು ಬಳಸಿಕೊಳ್ಳಬೇಕಾಗುತ್ತದೆ.

ಲೋಕರೂಢಿ-ಗ್ರಂಥಶಾಸ್ತ್ರ-ಗುರೂಪದೇಶ ಇವೆಲ್ಲ ಕಚ್ಚಾಸಾಮಗ್ರಿಗಳು. ಬಹುಜನ ಹಿತಾಯ-ಬಹುಜನ ಸುಖಾಯಕ್ಕೆ ಇವುಗಳ ಬಳಕೆ ಆಗಬೇಕು. ವ್ಯಕ್ತಿ-ಸಮಾಜ-ದೇಶದ ಒಳಿತಿಗೆ ಇವುಗಳ ಅಗತ್ಯವಿದೆ. ಕನ್ನಡದಲ್ಲಿ 'ಒಳ್ಳೆಯದು' ಹಾಗೆಂದರೇನು ? ಒಳ್‌ಧಾತು, ಇರುವುದು ಎಂದರ್ಥ. ಬಹುಕಾಲವಿರುವ, ಅಳಿಯದೆ-ಇರುವುದು, "ಒಳ್" ಒಳ್ಳೆಯದು ಸಂಸ್ಕೃತದ ಸತ್‌ಪದ ಸತ್ಯವೆಂದರೆ ಒಳ್ಳೆಯದು ಶಾಶ್ವತ ಎಂದು ಅರ್ಥ

"ಸದಾ ವೇ-ಸಾಧುಭಾವೇಚ ಸದಿತ್ಯೇತ್ ಪ್ರಯುಜ್ಯತೇ"
(ಗೀತಾ 17-26)

ಒಳ್ಳೆಯ ಭಾವನೆಯೇ ಸತ್ಯವೆಂದು ಅರ್ಥ.

ಯಾವುದಕ್ಕೆ ದೇಶ-ಕಾಲ-ಸಂದರ್ಭದ ಹಾನಿ ವಿಕಾರವಿಲ್ಲವೋ ಅದೇ ಶಾಶ್ವತ-ಸತ್ಯ. ಯಾವ ನಡವಳಿಕೆ-ಯಾವ ತಿಳುವಳಿಕೆಯಿಂದ ಯಾವ ಅನುಭವ-ಅಭ್ಯಾಸ ಸದ್ವಸ್ತುವಿನ ಕಡೆಗೆ ಕರೆದೊಯ್ಯುವುದೊ ಅದೇ ಸತ್ಯ. ಸತ್ಯಗುಣ ಒಂದು-ಒಳ್ಳೆಯದೆಂಬುದರ ಕಾರ್ಯಗಳು ಸಾವಿರ-ಸಾವಿರ. ಸತ್ಯವೇ ಒಂದು ಕಲ್ಯಾಣ ಗುಣ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಪಿಹಿತಂ
ಮುಖಂ |
ತತ್ ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ
ದೃಷ್ಟಯೇ ||

ಇದು ಉಪನಿಷತ್ತಿನ ಒಂದು ಪ್ರಾರ್ಥನೆ. ಸತ್ಯದ ಮುಖ ಚಿನ್ನದ ತಟ್ಟೆಯಿಂದ ಮರೆಯಾಗಿದೆ. ಸತ್ಯವನ್ನು ಧರ್ಮವನ್ನಾಗಿ ತಿಳಿದ ನಾನು ಸತ್ಯವನ್ನು ಕಾಣಲು ಬಯಸುತ್ತೇನೆ. ಸತ್ಯವನ್ನು ನಾನು ಕಾಣಲು ಓಪೂಷನ್ ಆ ಚಿನ್ನದ ತಟ್ಟೆಯನ್ನು ಆಚೆಗೆ ತೆಗೆ ಎನ್ನುವ ಈ ಪ್ರಾರ್ಥನೆಯಲ್ಲಿ ಸತ್ಯಾನ್ವೇಷಣೆ ಸತ್ಯ-ಸಾಕ್ಷಾತ್ಕಾರದ ಹಂಬಲವನ್ನು ಕಾಣುತ್ತೇವೆ.

ಅಹಿಂಸಾ-ಸತ್ಯ-ಅಸ್ತೇಯ-ಬ್ರಹ್ಮಚರ್ಯಾ-ದಯಾ-ಕ್ಷಮಾ-ಜಪ-ಧ್ಯಾನ ಇವು ಧಾರ್ಮಿಕ ಗುಣಗಳು (Sister Charecters) ಸಹೋದರ ಗುಣಗಳು ಸಮಾನ ಗುಣಗಳಲ್ಲಿ ನಮ್ಮವರು ಸತ್ಯಕ್ಕೆ ಅತಿಶಯವಾದ ಗೌರವವನ್ನು ಬೆಲೆಯನ್ನು ನೀಡಿದ್ದಾರೆ ಶಾಸ್ತ್ರಗಳಲ್ಲಿ (ನಡವಳಿಕೆಯಲ್ಲಿ)

ಋತು - ಸತ್ಯ - ಧರ್ಮ - ದೇವರು ಈ ಪದಗಳನ್ನು ಕೆಲವು ಕಡೆ ಸಮಾನಾರ್ಥದಲ್ಲಿ ಬಳಸುತ್ತಾರೆ. ಅಷ್ಟೇ ಅಲ್ಲ ಸತ್ಯಮ್ ಭೂತಾ - ಸತ್ಯವೇ ದೇವರು (Truth-is God) ಸತ್ಯವೇ ಧರ್ಮವೆಂದರು.

ಹಾಗೂ ರಾಘವಾಂಕನು ತನ್ನ ಮಹೋನ್ನತ ಕಾವ್ಯವಾದ ಹರಿಶ್ಚಂದ್ರ ಕಾವ್ಯದಲ್ಲಿ "ಹರನೆಂಬುದೇ-ಸತ್ಯ ಸತ್ಯವೆಂಬುದೆ ಹರನು."

"ಅತಿ ಹುಸಿಯಲೆ ಹೊಲೆಯ : ಹುಸಿಯದಿಹ ಹೊಲೆಯನು ಎನ್ನುತ ಯತಿವರನು
ಹುಸಿದು ಮಾಡುವ ಮಹಾಯಜ್ಞ ಶತಮೆದ್ದು ಪಂಚಪಾತಕ
ಸತ್ಯವೆರಸಿದ ನ್ಯಾಯವದು ಲಿಂಗಾರ್ಚನೆ-"

ಜೀವನ ಅನುಭವ-ಆವರಣ ವಿಸ್ತಾರ-ಆಳ ಬದಲಾದಂತೆ ಸತ್ಯವೂ ಕಾಲದಿಂದ ಕಾಲಕ್ಕೆ ಬದಲಾಯಿಸುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ಸತ್ಯ ಹುಟ್ಟಿ ಸಾರ್ಥಕವಾಗುತ್ತದೆ. ಸತ್ಯವೊಂದು ಪದಾರ್ಥವಲ್ಲ : ಯಾವ ಭಾವನೆಯಿಂದ ನಮ್ಮ ಜೀವನಕ್ಕೆ ನೆಮ್ಮದಿ ಅರಿವು ಉಂಟಾಗುತ್ತದೆಯೋ ಅದು ಸತ್ಯ. ಅದೊಂದು ಗುಣ ಮೌಲ್ಯ.

ಸತ್ಯದ ನಿಲವು ಅಗೋಚರ ಎಂದವರೇ ಹೆಚ್ಚು ಜನ. ಸಕಾಲಿಕ ಸತ್ಯ-ತತ್ಕಾಲಿಕ ಸತ್ಯ-ಸಾರ್ವಕಾಲಿಕ ಸತ್ಯ ಹೀಗೆ ವಿಂಗಡಿಸಬಹುದೆಂದು ತೋರುತ್ತದೆ. ಅಲ್ಲಿಗೆ ಧಾರ್ಮಿಕ ಸತ್ಯ - ವೈಜ್ಞಾನಿಕಸತ್ಯ - ರಾಜಕೀಯ - ಕೌಟುಂಬಿಕ ರಾಷ್ಟ್ರಸತ್ಯವೆಂದು ವಿಂಗಡಿಸಬಹುದು. ದೃಷ್ಟಿಯಂತೆ ಸೃಷ್ಟಿ ಎನ್ನುವ ಪರಿ ಇನ್ನೆಲ್ಲ ಸತ್ಯಾಂಶಗಳು : ಆದರೆ ಪೂರ್ಣ ಸತ್ಯವಲ್ಲ.

ಸತ್ಯ ಅವರವರ ನಿಲುವಿಗೆ-ಅರಿವಿಗೆ ಅನುಗುಣವಾಗಿ ಕಾಣುತ್ತದೆ. ಶಿವಗಂಗೆಯ ಬೆಟ್ಟ ನಿಲುವಿಗೆ ಅನುಗುಣವಾಗಿ ಸಿಂಹಾಚಲ-ವೃಷಭಾಚಲ-ಸರ್ಪಾಚಲ-ಗಜಾಚಲದಂತೆ ಕಾಣಬಹುದು. ಆದರೆ ಈ ನೋಟ ಅಂಶಿಕವಾದ ಸತ್ಯ. ಕೇವಲ ಪಾರ್ಶ್ವನೋಟ ; ಪೂರ್ಣ ನೋಟವಲ್ಲ ; ಪೂರ್ಣ ಸತ್ಯವಲ್ಲ. ಉಪನಿಷತ್ತಿನ ಕಥೆಯಂತೆ ಬ್ರಹ್ಮನು ದೇವ-ದಾನವ-ಮಾನವರಿಗೆ "ದ" ಎಂದು ಉಪದೇಶ ಮಾಡುತ್ತಾನೆ. ಅವನು ಉಪದೇಶಿಸಿದ ಸತ್ಯ ಅವರವರ ಅರಿವಿಗೆ ಅನುಗುಣವಾಗಿ ಅರ್ಥವಾಯಿತು. ದೇವತೆಗಳಿಗೆ ಭೋಗವನ್ನು ದಮನಿಸಬೇಕೆಂದೂ, ಮನುಷ್ಯರು ಸ್ವಾರ್ಥವನ್ನು ದಮನಿಸಿ ಉದಾರಿಗಳಾಗಬೇಕೆಂದೂ, ಹಾಗೆಯೇ ರಾಕ್ಷಸರು ಹಿಂಸಾಕೃತ್ಯಗಳನ್ನು ದಮನಿಸಿ ದಯಾವಂತರಾಗಲು ಅವರವರು ತಮ್ಮ-ತಮ್ಮಲ್ಲಿದ್ದ ಓರೆ-ಕೋರೆ ಗುಣಗಳನ್ನು ತಿದ್ದಿಕೊಳ್ಳುವ ಉಪದೇಶವೆಂದು ಬಗೆದರು. ಹಾಗೆಯೇ 'ಸತ್ಯವೊಂದೇ' ಅದರ ಅರ್ಥ ಹಲವು. ಅವರವರ ದೃಷ್ಟಿಯಂತೆ ಒಂದಕ್ಕೆ ಸುಳ್ಳಾಗಿ ಕಂಡದ್ದು-ಮತ್ತೊಂದಕ್ಕೆ ಸತ್ಯವಾಗಿ ಕಾಣುತ್ತದೆ. ಉದಾ: ಹಂಪೆ ಆಂಧ್ರರಿಗೆ ಸೇರಿದ್ದೋ-ಕರ್ನಾಟಕಕ್ಕೆ ಸೇರಿದ್ದೋ ಎನ್ನುವಾಗ ಸಂಶಯ-ಸುಳ್ಳು ಇತಿಹಾಸವಾಗಬಹುದು. ಆದರೆ ಭೂಗೋಳಕ್ಕೆ ಯಾವಾಗಲೂ ಸತ್ಯವಾಗಿ ಕಾಣುತ್ತದೆ. ಅಂದರೆ ಹಂಪೆ ತುಂಗಭದ್ರಾದ ದಡದಲ್ಲಿದೆ ಎಂದು. ದೃಷ್ಟಿಕೋನ ಬದಲಾದಂತೆ ಸತ್ಯವು ವಿಭಿನ್ನ ರೀತಿಯಲ್ಲಿ ಕಾಣಬಹುದು. ಆದ್ದರಿಂದ ಸತ್ಯವನ್ನು ಇದಮಿತ್ಥಂ ಎಂದು ಹೇಳಲು ಬರುವುದಿಲ್ಲ. ದೇಶ-ದೇಶಗಳ ಸಮಾಜ-ಸಮಾಜಗಳು ನಾಗರೀಕತೆಯ ವಿಭಿನ್ನತೆಗಳಿಂದಲೂ ಸತ್ಯ ವ್ಯತ್ಯಾಸವಾಗಿ ತೋರಬಹುದಾಗಿದೆ.

ಸತ್ಯಕ್ಕೂ ಪ್ರಯೋಜನಕ್ಕೂ ಸಂಬಂಧವಿಲ್ಲ-ಒಳಿತು ಆಗಬಹುದು-ಕೆಡಕೂ ಆಗಬಹುದು ಸುಳ್ಳಿನಿಂದಲೂ ಒಳ್ಳೆಯ ಪ್ರಯೋಜನವಾಗುತ್ತದೆ-ಎಷ್ಟೋ ಸಾರೆ. ಆದರೆ ಸತ್ಯ ಅದನ್ನು ಸರಿಯಾಗಿ ಪ್ರಯೋಗಿಸುವವನ ನೈತಿಕ ಶಕ್ತಿಯ ಮೇಲೆ ಅದರ ಮೌಲ್ಯನಿಂತಿದೆ ಅಷ್ಟೇ. ಯಾವುದೇ ಧಾರ್ಮಿಕ ಗುಣಗಳಾಗಲೀ ಅವುಗಳನ್ನು ಸದುಪಯೋಗಗೊಳಿಸುವ ಹದವರಿತು ಪ್ರಯೋಗಿಸುವ ವ್ಯಕ್ತಿಯ ಶಕ್ತಿಯ ಮೇಲೆ ಅವುಗಳಿಗೆ ಮೌಲ್ಯ ಬರುತ್ತದೆ. ವಿಜ್ಞಾನದಂತೆ ಅದರ ಸದುಪಯೋಗ ಜಗತ್ತಿಗೆ ತಾರಕ. ದುರುಪಯೋಗ ಮಾರಕ. ಪಂಚೇಂದ್ರಿಯಗಳಿಗೆ ಗೋಚರವಾಗುವ ಜ್ಞಾನ, ತಪ್ಪಿನಿಂದ ಕೂಡಿರುತ್ತದೆ ಇಂದ್ರಿಯಾತೀತವಾದುದು ಸತ್ಯವೆಂದರು ಗಾಂಧೀಜಿ, ಆದರ ಅನುಭವ ಯಾರಿಗಾಯಿತು ? ಬಹುಶಃ ಅವರೊಬ್ಬರಿಗೇ ಆಗಿರಬೇಕು ! ಗಾಂಧೀಜಿಯವರೂ ಸಹ ಸತ್ಯವನ್ನು ದೇವರಿಗೆ ತಳಕು ಹಾಕುತ್ತಾರೆ. ಸತ್ಯವನ್ನೇ ದೇವರೆಂದರು Truth is God. Denial of God we have known denial of truth we have not known. ಅಸ್ತೀತಿ ಸತ್-ಸತ್ ಎಂದರೆ ವೇದಾಂತದಲ್ಲಿ ಪರಬ್ರಹ್ಮವೆಂದೇ ವ್ಯವಹಾರ.

"ಸತಾಂ ಹಿ ಸಂದೇಹ ಪದೇಷು ವಸ್ತುಷು ಪ್ರಮಾಣಮಂತಃ ಕರಣ ಪ್ರವೃತ್ತಯಃ (ಕರುಣ) ಕಾಳಿದಾಸನ ಈ ಅಭಿಪ್ರಾಯದಲ್ಲಿ ಅಂತಃಕರಣಪ್ರವೃತ್ತಿಯೇ ಮಹಾತ್ಮರದು. ಅದು ಸತ್ಯಸಾಕ್ಷಿ ಅದೇ ಧರ್ಮವೆಂದು ಕಾಳಿದಾಸನ ಅಭಿಮತ ಹೀಗೆ ಸತ್ಯದ ಬಗ್ಗೆ ವಿಚಾರ ಧಾರೆಯನ್ನು ಬೆಳಸುತ್ತಾ ಹೋಗಬಹುದು.

ಇನ್ನು ಕಲ್ಯಾಣದ ವಿಷಯ—ಅಮರಸಿಂಹನು ತನ್ನ ಅಮರಕೋಶದಲ್ಲಿ "ಸ್ವಶ್ರೇಯಸಂ-ಶಿವಂ-ಭದ್ರಂ-ಕಲ್ಯಾಣಂ ಮಂಗಳಂ-ಶುಭಂ" ಎನ್ನುತ್ತಾನೆ. ಇಲ್ಲೂ ಬಹುಜನದ ಸುಖ-ಬಹುಜನದ ಹಿತಕ್ಕೆ ಒಳಿತಾಗುವುದನ್ನೇ ನಾವು ಕಲ್ಯಾಣವೆನ್ನುತ್ತೇವೆ. 'ಕಲ್ಯಾಣ'ವೂ ಕೂಡಾ ವ್ಯಕ್ತಿಯಿಂದ ವ್ಯಕ್ತಿ-ಸಮಾಜದಿಂದ-ಸಮಾಜಕ್ಕೆ ದೇಶದಿಂದ-ದೇಶಕ್ಕೆ ಅದರ ಅರ್ಥ ಬದಲಾಗಬಹುದಾಗಿದೆ. ದೇಶ-ಕಾಲ-ಪರಿಸ್ಥಿತಿಯನ್ನು ಅನುಸರಿಸಿ ಸಂದರ್ಭದ ಶಿಶುವಾಗಿ ಕಲ್ಯಾಣ ಜನಿಸುತ್ತದೆ. ನಮಗೆ ಕಲ್ಯಾಣ ಕಂಡದ್ದು-ಮತ್ತೊಬ್ಬರಿಗೆ ಅಕಲ್ಯಾಣವಾಗಿ ಕಾಣುವ ಸಾಧ್ಯತೆ ಇದೆ. ಅದೂ ಸಹ ನಮ್ಮ ಸಂದರ್ಭ-ನಿಲುವು ದೃಷ್ಟಿಕೋನ-ಪ್ರಯೋಜನವನ್ನು ಅವಲಂಬಿಸಿದೆ. ಯಾವುದೇ ಉತ್ತಮ ಗುಣಗಳು ಉತ್ತಮ ವ್ಯಕ್ತಿಯ ಕೈಯಲ್ಲಿ ಸಿಕ್ಕಿ ಉತ್ತಮವಾಗಿ ಬಳಕೆಯಾದಾಗ ಅವುಗಳ ಮೌಲ್ಯ ಹೆಚ್ಚುತ್ತದೆ. ಕಲ್ಯಾಣವೂ ಸತ್ಯದಂತೆ ಒಂದು ಗುಣಮೌಲ್ಯವಷ್ಟೇ.

ಕಲ್ಯಾಣದಲ್ಲಿ ಯಾವಾಗಲೂ ಎರಡು ದಾರಿಗಳಿವೆ. ಸತ್ಯಕ್ಕೂ-ಇವೆ. ಒಂದು ಶ್ರೇಯಸ್ಸಿನದು-ಮತ್ತೊಂದು ಪ್ರೇಯಸ್ಸಿನದು. ಶ್ರೇಯೋಹಿ"ಧೀರೋಽಅಭಿಪ್ರೇಯಸೋ ವೃಣೀತೆ ಪ್ರೇಯೋ ಮಂದೋಯೋಸ ಕ್ಷೇಮಾವೃಣೀತೆ" ಎನ್ನುತ್ತದೆ ಉಪನಿಷದ್ವಾಣಿ. ಧೀರನು ಶ್ರೇಯಸ್ಸಿನ ದಾರಿಯಲ್ಲಿ ಎಷ್ಟೇ ಎಡರು ತೊಡರುಗಳು ಬಂದರೂ ಸಾಗುತ್ತಾನೆ. ಆದರೆ ಮಂದಮತಿಯು ತತ್ಕಾಲಸುಖವನ್ನೇ ಸರಿ ಎಂದು ನಂಬಿ ಪ್ರೇಯಸ್ಸನ್ನು ಆರಿಸಿಕೊಳ್ಳುತ್ತಾನೆ. ಕ್ಷಣಿಕ ಸುಖ-ತತ್ಕಾಲ ತೃಪ್ತಿ ನೀಡುವ ಕುಬ್ಜ-ಕೀಳು ಅಭಿರುಚಿಯ ವಾಮಮಾರ್ಗವೇ ಪ್ರೇಯಸ್ಸು. ಅನಂತಕಾಲ ನಿಲ್ಲುವ ಶಾಶ್ವತ ಸುಖ ಮೌಲ್ಯವನ್ನು ನೀಡುವುದೇ ಶ್ರೇಯಸ್ಸಿನ ದಾರಿಯಾಗಿದೆ. ಸ್ವಾರ್ಥಿಯಾಗುವುದೇ ಪ್ರೇಯಸ್ಸು. ನಿಃಸ್ವಾರ್ಥಿಯಾಗುವುದೇ ಶ್ರೇಯಸ್ಸು. ಭೋಗಿಯಾಗುವುದೇ ಪ್ರೇಯಸ್ಸು ತ್ಯಾಗಿಯಾಗುವುದೇ ಶ್ರೇಯಸ್ಸು ಸತ್ಯದಂತೆ ಕಲ್ಯಾಣವೂ ಶ್ರೇಷ್ಠ ಗುಣ, ಎರಡೂ ಶ್ರೇಷ್ಠ ಗುಣಗಳೇ. ಸತ್ಯವಿಲ್ಲದೆ ಕಲ್ಯಾಣ ಜೀವವಿಲ್ಲದ ಶವ. ಶಕ್ತಿಯಿಲ್ಲದ ಶಿವ ಅಂತೆಯೇ ಕಲ್ಯಾಣ ದೃಷ್ಟಿಇಲ್ಲದ ಸತ್ಯ Life without body or Lamp without light ಆಗಿದೆ

ಕಲ್ಯಾಣಕ್ಕೆ ಸತ್ಯದ ಹಿನ್ನಲೆ ಬೇಕು. ಸತ್ಯಕ್ಕೆ ಕಲ್ಯಾಣದ ದೃಷ್ಟಿಬೇಕು 'ಅಂಧಪಂಗು'ನ್ಯಾಯದಂತೆ (ಕುರುಡ-ಕುಂಟ ನ್ಯಾಯ) ಪರಸ್ಪರ ಅವಲಂಬಿಗಳು.

ಲೋಕ ಹಿತಕ್ಕೆ ಈ ಎರಡೂ ಬೇಕು "Means and ends" ಸಾಧನೆ ಉತ್ತಮವಾದರೆ ಸಿದ್ಧಿ. ಸತ್ಯ ಸಾಧನೆಯಿಂದ ಕಲ್ಯಾಣದ ಸಿದ್ಧಿ ಪಡೆಯಬಹುದು. ಕಲ್ಯಾಣ ಮಾರ್ಗದಲ್ಲಿ ಸಾಗಿದಾಗ ಸತ್ಯದ ನಿಲುವು ದೊರೆಯಬಹುದು. ಬೀಜವೃಕ್ಷನ್ಯಾಯದಂತೆ "ಉತ್ತಮ ಬೀಜದಿಂದ ಉತ್ತಮಫಲ" ಕಲ್ಯಾಣದ ಬೀಜ ಬಿತ್ತಿದರೆ ಸತ್ಯದಫಲ ಪಡೆಯಬಹುದು. ಸತ್ಯದಫಲವೆಂದರೆ ಒಳ್ಳೆಯ ಫಲವೆಂದರ್ಥ. ಸತ್ಯದ ಬೀಜಬಿತ್ತಿದರೆ ಕಲ್ಯಾಣದ ಫಲವೂ ದೊರೆಯಬಹುದಾಗಿದೆ. ಹೀಗೆ ಸತ್ಯ-ಕಲ್ಯಾಣಗಳು ಧರ್ಮದ ಎರಡು ಕಣ್ಣುಗಳು. ಕಣ್ಣುಗಳೆರಡಾದರೂ ಅವುಗಳ ದೃಷ್ಟಿ-ಗುರಿ ಒಂದೇ ಆಗಿದೆ.

ಹೀಗಿರುವಾಗ ಸತ್ಯಕಿಂತ–ಕಲ್ಯಾಣ ಶ್ರೇಷ್ಠವೆನ್ನುವಮಾತು ಅದಕ್ಕೆಕೊಡುವ ಯುಕ್ತಿಯುಕ್ತ ಉದಾಹರಣೆಗಳು ವ್ಯಾವಹಾರಿಕ ಹಾಗೂ ತಾತ್ಕಾಲಿಕ–ಪ್ರೇಯಸ್ಸಿನ ದಾರಿಯನ್ನು ಹಿಡಿದ ಮಾತುಗಳಾಗಿವೆ. ತತ್ಕಾಲ ಪ್ರಯೋಜನ–ವ್ಯಾವಹಾರಿಕ ಅರ್ಥದಿಂದ ಭೌತಿಕ ಜೀವನದ ಸುಖ–ಸುಪ್ಪತ್ತಿಗೆ ಲಭಿಸಬಹುದು ಅಥವಾ ಆಪತ್ತಿನಿಂದ ಜಾರಿಕೊಳ್ಳುವದಾರಿಯೂ ಆಗಬಹುದು ಜೀವಗಳ್ಳರಿಗೆ. ಆದರೆ ಭಾರತೀಯರ ದೃಷ್ಟಿಕೋನದಲ್ಲಿ 'ಸತ್ಯವೇ ದೇವರಾಗಿದೆ, ಇವರ ತತ್ವದಲ್ಲಿ ಸತ್ಯವೇ ದೇವರಾಗಿದೆ. ಆಚರಣೆಯಲ್ಲಿ ಇವರು ದೇವರನ್ನು ಕಂಡಿಲ್ಲ-ಸತ್ಯವನ್ನು ಕಂಡಿಲ್ಲ! ಎಲ್ಲಲ್ಲೂ ಅಪ್ರಾಮಾಣಿಕವಾದ ಭಾರತೀಯರ ಜೀವನದಲ್ಲಿ ಸತ್ಯ–ಕಲ್ಯಾಣಗಳೆರಡು ಮೌಲ್ಯಕಳೆದುಕೊಂಡ ಸವಕಲು ನಾಣ್ಯಗಳಾಗಿವೆ. ತಾತ್ವಿಕದೃಷ್ಟಿಯಿಂದ ಸತ್ಯದ ಮೌಲ್ಯ ಅಗಣಿತ. ವಾಸ್ತವಿಕ ದೃಷ್ಟಿಯಿಂದ ಇದು ಅಪಮೌಲ್ಯವನ್ನು ಪಡೆದು ಸತ್ತಿದೆ. ನಮ್ಮ ಕಾಲದಲ್ಲೂ ಗಾಂಧೀಜಿಯಂತಹ ಜೆ. ಪಿ. ಸತ್ಯ ಸಾಧಕರು ಇದ್ದರೆಂಬುವಮಾತು. ಸತ್ಯದ ಸತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಶ್ರೇಯಸ್ಸಿನ ಮಾರ್ಗ ಕಠಿಣವೇ ಸರಿ. ಹಿಮಾಲಯ ಪರ್ವತವನ್ನೇರಲು ಕಾಲು ಗಟ್ಟಿ ಇರಬೇಕು ಅಷ್ಟೇಅಲ್ಲಃ ಧೈರ್ಯಸಾಹಸ ಗುಣಗಳೂ ಇರ

ಬೇಕು. "ಆರಾರ್ ವರರ್ ಶಾಸ್ತ್ರ ಶ್ರೀರೋಹಣ ಮಾರಾರಿಯ ಕೃಪೆ ಬೇಕು"ಎನ್ನುತ್ತಾನೆ ಷಡಕ್ಷರದೇವ. ಇಣಚಿ–ಹತ್ತಿದರೆ ಅರಳಿಮರ ಅಲ್ಲಾಡುವುದೇ ? ಸತ್ಯವನ್ನು ಲಘುವಾಗಿ ಭಾವಿಸಬಾರದು ಶ್ರೇಯಸ್ಸಿನ ಬಾಳಿಗೆ ದಿವ್ಯ ಸಂಸ್ಕೃತಿಯ ಸತ್ವಕ್ಕೆ ಸತ್ಯವೇ ನೆಲೆ–ಹಿನ್ನೆಲೆ ಧರ್ಮಕ್ಕೂ ಅದೇ ದಾರಿ.

ಸತ್ಯಹೇಳುವದರಿಂದಲೂ ಅನೇಕ ಕಷ್ಟಗಳಿವೆ. ಸುಳ್ಳು ಹೇಳುವದರಿಂದಲೂ ಇವೆ, ಸುಳ್ಳಿನಿಂದ ತತ್ಕಾಲ ಪರಿಹಾರ–ಕಲ್ಯಾಣ ಸಿಗಬಹುದಾದರೂ ಸತ್ಯ ಪ್ರಕಟವಾದಾಗ ಅದರ ಪರಿಣಾಮ ಇನ್ನೂಘೋರ. ಸುಳ್ಳು ಸುಖಕ್ಕೆ ದಾರಿಯಾಗಬಹುದು ಅದು ಪ್ರೇಯಸ್ಸಿನದಾರಿ. ಸತ್ಯದಿಂದ ಕಠೋರ ಕಷ್ಟಗಳನ್ನು ಎದುರಿಸಬೇಕಾದರೂ ಅದು ಶ್ರೇಯಸ್ಸಿನ ದಾರಿ, ಅದು ಧೀರರದಾರಿ. ನಮ್ಮ ಶಕ್ತಿ-ಸಾಮಥ್ಯಗಳಿಗನುಗುಣವಾಗಿ ಮಾರ್ಗಗಳನ್ನು ಆರಿಸಿಕೊಳ್ಳಬೇಕಾಗಿದೆ. ದುರ್ಬಲರಿಗೆ- ಹೇಡಿಗಳಿಗೆ- ಪ್ರೇಯದಾರಿಯೇ ಸರಿ. ಹಾಗೆಂದು ಸತ್ಯಕ್ಕೆ ಅಪಚಾರಮಾಡಬಾರದು. ಒಂದು ಉದಾಹರಣೆಯನ್ನು ಕೊಡುವುದಾದರೆ. ಗೆಲಿಲಿಯೋ ಪೋಪರ ಎದುರಿಗೆ ಸುಳ್ಳು ಹೇಳಿದ. ಅವನು ಸ್ವಂತ : ಅಪರಾಧಿಯಾಗಿರಲಿಲ್ಲ. ಪೋಪರ ದೃಷ್ಟಿಯಲ್ಲಿ ಅಪರಾಧಿಯಾಗಿದ್ದನಷ್ಟೇ. ಅವನು ಸತ್ಯ ಸಾಧಕನಾಗಿದ್ದ—ಇನ್ನು ಬದುಕಿಸತ್ಯ ಸಿದ್ಧಾಂತಗಳನ್ನು ಕಂಡು ಹಿಡಿಯುವ ಅವನ ಅಭೀಷ್ಟವಾಗಿತ್ತು. ಅದರಲ್ಲಿ ಲೋಕ ಕಲ್ಯಾಣ ಭಾವನೆಯೂ ಅಡಗಿತ್ತು. ಇಲ್ಲಿ ಸತ್ಯ ಮುಳುಗಲಿಲ್ಲ : ಸತ್ಯವನ್ನೂ ಎತ್ತಿಹಿಡಿಯಲು ಸುಳ್ಳು ಹೇಳಬೇಕಾಯಿತು. ಹೀಗೆ ವ್ಯಕ್ತಿ ಪವಿತ್ರನಾಗಿದ್ದು ದೋಷದೂರವಾಗಿದ್ದು—ಅವನ ದೃಷ್ಟಿ ಕಲ್ಯಾಣದಕಡೆಗಿದ್ದರೆ ಅವನು ಹೇಳುವ ಸುಳ್ಳು ಪರಿಗಣಿಸಬೇಕಾಗಿಲ್ಲ. ಆದರೆ ಕಳ್ಳನೊಬ್ಬ ಈ ಕೆಲಸಮಾಡಿದಾಗ ಪರಿಣಾಮ ವಿಕಾರವನ್ನು ಹೊಂದುತ್ತದೆ.

ಮದುವೆಗೆ ಮೊದಲು ನೈತಿಕ ಪತನ ಹೊಂದಿದ್ದ ಕನ್ಯೆಯನ್ನು ವರನಿಗೆ ಸುಳ್ಳು ಹೇಳಿ ಕಲ್ಯಾಣ ಸಾಧಿಸಿದರೆ ಅವಳಿಗೇನೋ ಕಲ್ಯಾಣ ವಾಯಿತು. ಆದರೆ ಸತ್ಯ ಪ್ರಕಟವಾದರೆ ದಾಂಪತ್ಯಜೀವನದಲ್ಲಿ ವಿರಸಉಂಟಾಗುವದಿಲ್ಲವೇ ! ಕುಂತಿಯು ಸತ್ಯದ ಮೇಲೆ ಮಣ್ಣುಹಾಕಿ ಕರ್ಣನ ಜನನವನ್ನು ರಹಸ್ಯವಾಗಿ ಇಟ್ಟಿದ್ದಳು—ಮುಂದೆ ಅದು ಕೃಷ್ಣನಿಂದ ವಿವರವಾಗಿ ತಿಳಿದಾಗ ಕರ್ಣನ ಮನಸ್ಥಿತಿಯ ಗತಿ ?

ಹೀಗೆ ಈ ವಿಷಯದ ಬಗ್ಗೆ ಪರ—ವಿರೋಧ ಹೇಳಿ ಕರ್ಣಗೆ ಅವಕಾಶವಿದೆ. ಆದರೂ ಸತ್ಯದ ಮುಖವನ್ನು ಮರೆ ಮಾಡಿದ ಕಲ್ಯಾಣ ಅಕಲ್ಯಾಣ ವಾಗುತ್ತದೆ. ಎಂಬದಂತೂ ನಿಜ.

ಈ ದೃಷ್ಟಿಯಿಂದ ಸತ್ಯ—ಕಲ್ಯಾಣಗಳು ಸಮಾನ ಗುಣಧರ್ಮಗಳು. ಒಂದಕ್ಕಿಂತ ಒಂದು ಹೆಚ್ಚಲ್ಲ—ಕಡಿಮೆಯೂ ಅಲ್ಲ.

ಕೂಟ

ಸ್ವಾರ್ಥ ಪರಂಪರೆಯು ಜನರ ಒಕ್ಕೂಟ
ಹೇಳುವುದು ನಿಸ್ವಾರ್ಥ ಪ್ರೇಮಾದರಗಳ ಪಾಠ,
ಕರುಬುವ ಜನರಿವರು ಪ್ರಗತಿ ನೋಡಿ,
ಹಾಕಲೆತ್ನಿಸುವರು ನೋಡಿ, ಒಟ್ಟಾಗಿ ಕೂಡಿ.

ಸರ್ವವ್ಯಾಪಿ- ಕಾಫಿ

ಪರೀಕ್ಷೆಗೆ ಸಿದ್ಧತೆ ಓದಲ್ಲ ಮತ್ತೆ ಬರೀ ಕಾಫಿ,
ಸಾಂಕ್ರಮಿಕ ವ್ಯಾಧಿಯಿದು ಸರ್ವವ್ಯಾಪಿ.
ಇದರ ಮೂಲ ರೋಗಾಣು ಬೇರಲ್ಲ ಯಾರು,
ಎಲ್ಲವನು ಬೋಧಿಸುವ ಪ್ರೀತಿಯ ಗುರು.

ಕೆ. ಹೆಚ್.

ಕ್ರಾಂತಿಯ ಅಲೆಗಳು

—ಕೆ. ಜಿ. ಹಿರಿಯಣ್ಣಯ್ಯ

೧೯೭೫ರ ಅಕ್ಟೋಬರ್‌ನಿಂದ ೧೯೭೭ರ ಫೆಬ್ರವರಿಗೆ ಆಗಿನ ಭಾರತ ಸರ್ಕಾರದ ವಿದೇಶಾಂಗ ಇಲಾಖೆ, ಗೃಹಸಚಿವ ಖಾತೆ ಮತ್ತು ವಾರ್ತಾ ಮತ್ತು ಪ್ರಸಾರ ಇಲಾಖೆಗಳು ಭಾರಿ ಪೇಚಿಗೆ ಸಿಕ್ಕಿದ್ದವು, ಆ ದಿನಗಳಲ್ಲಿ ಕೆನಡಾ, ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್ ಮತ್ತು ಪಶ್ಚಿಮ ಯೂರೋಪಿನ ಅನೇಕ ದೇಶಗಳಲ್ಲಿ ಪ್ರದರ್ಶಿಸಲಾಗುತ್ತಿದ್ದ ಒಂದು ಚಲಚ್ಚಿತ್ರದಿಂದಾಗಿ ಭಾರತದ ಸರ್ವಾಧಿಕಾರಿಯ ವಾಸ್ತವಿಕ ಚಿತ್ರವು ಪ್ರಪಂಚಕ್ಕೆಲ್ಲಾ ಗೊತ್ತಾಗುತ್ತಿತ್ತು ಮತ್ತು ಇಡೀ ಸರ್ಕಾರದ ಪ್ರಚಾರ ಸುಳ್ಳೆಂದು ಗೊತ್ತಾಗುತ್ತಿತ್ತು. ಇಂತಹ ಚಿತ್ರವನ್ನು ಯಾರು ತಯಾರಿಸಿದರು, ಏಕೆ ತಯಾರಿಸಿದರು ಮತ್ತು ಅದು ಹೇಗೆ ವಿದೇಶಗಳನ್ನು ತಲುಪಿತು ಎನ್ನುವುದನ್ನು ಕಂಡು ಹಿಡಿಯಲು ಇಂದಿರಾ ಸರ್ಕಾರ ಹೈರಾಣಾಗಿತ್ತು.

ಅತುಲ್ ಗೋಡಬೋಲೆ-ಕ್ಷಮಿಸಿ, ಇದು ತುರ್ತು ಪರಿಸ್ಥಿತಿಯಲ್ಲಿ ಅವರಿಟ್ಟುಕೊಂಡಿದ್ದ ಹೆಸರು—ಆನಂದ ಪಟವರ್ಧನ್ ಅವರು ಕಳೆದೆರಡು ವರ್ಷಗಳಿಂದ ಹೋಶಂಗಾ ಬಾದ್ ನಲ್ಲಿ 'ಕಿಶೋರ್ ಭಾರತಿ' ಹೆಸರಿನ ಸಂಸ್ಥೆಯ ಜೊತೆ ರಚನಾತ್ಮಕ ಕಾರ್ಯದಲ್ಲಿ ತೊಡಗಿದ್ದರು. ಅದೇ ಕಾಲಕ್ಕೆ ಬಿಹಾರದಲ್ಲಿ ಯುವಕರ ಚಳುವಳಿ ಪ್ರಾರಂಭವಾಯತು. ಅದರಲ್ಲಿ ಶ್ರೀ ಜಯಪ್ರಕಾಶನಾರಾಯಣರೂ ಸೇರಿದರು. ಚಳುವಳಿಯ ಗುರಿ 'ಸಂಪೂರ್ಣಕ್ರಾಂತಿ' ಎಂದು ಅವರು ಘೋಷಿಸಿದರು. ತಾನು ಈ ಚಳುವಳಿಯನ್ನು ನೋಡಬೇಕು ಎಂದು ಕೊಂಡರು ಪಟವರ್ಧನ್, ಬಹುಶಃ ಇದರಿಂದ ತಮಗೆ ಹೊಸದೊಂದು ದಾರಿ ಸಿಗಬಹುದು.

ಆನಂದ್ ಅಕ್ಟೋಬರ್ 1974 ರಲ್ಲಿ ಪಟ್ನಾಕ್ಕೆ ಹೋದರು. ಅಷ್ಟುಹೊತ್ತಿಗೆಲ್ಲ ಗಯಾ, ರಾಚಿ, ಮುಜಫ್ಫರಪುರ ಮೊದಲಾದ ಕಡೆಗಳಲ್ಲಿ ಗೋಳಿಬಾರು ನಡೆದಿತ್ತು. ಚಳುವಳಿ ಹಳ್ಳಿಗಳನ್ನೂ ವ್ಯಾಪಿಸತೊಡಗಿತ್ತು. ತಾವು ಹೋದಲ್ಲೆಲ್ಲಾ ಅಲ್ಲಿಯ ರೈತರು, ಕೂಲಿಗಾರರು ಮತ್ತು ವಿದ್ಯಾರ್ಥಿಗಳೊಂದಿಗೆ ಚಳುವಳಿಯ ಮೂಲಭೂತ ವಿಷಯಗಳ ಚರ್ಚಿಸಿ, ಆ ಮಾತುಕತೆಗಳನ್ನು ಟೇಪ್‌ರೆಕಾರ್ಡ್‌ಮಾಡಿಕೊಳ್ಳಲು ಅವರು ಪ್ರಯತ್ನಿಸಿದರು. 'ಅಂದರೆನಗರಗಳಲ್ಲಿ ಕುಳಿತ ಮಿತ್ರರಿಗೆ ಚಳುವಳಿ' ಅಂದರೇನೆಂಬುದನ್ನು ಮನವರಿಕೆ ಮಾಡಿಕೊಂಡಬಹುದು ಎಂದು ಅವರ ಅಭಿಪ್ರಾಯ.

ನೋಡಬಹುದು, ಅರಿತು ಕೊಳ್ಳುವುದು ಇಷ್ಟೇ ಸಾಲದು, ಚಳುವಳಿಯಲ್ಲಿ ಸೇರುವುದೂ ಅಗತ್ಯ ಎಂದು ಅಕ್ಟೋಬರ್ ಕೊನೆಯ ವಾರದಲ್ಲಿ ಅವರಿಗೆ ಅನಿಸಿತು. ಅದಕ್ಕಾಗಿ ಅವರು ಚಲನಚಿತ್ರವನ್ನು ಮಾಧ್ಯಮವನ್ನಾಗಿ ಆರಿಸಿಕೊಂಡರು. ನವೆಂಬರ್ ೪ ರಂದು ಪಾಟ್ನದಲ್ಲಿ ವಿರಾಟ್ ಜನ ಪ್ರದರ್ಶನ ಏರ್ಪಡಿಸುವುದಾಗಿ ಜಯಪ್ರಕಾಶರು ಘೋಷಿಸಿದ್ದರು. ಆನಂದ್ ಕೂಡಲೇ ದಿಲ್ಲಿಗೆ ಹೋದರು, ಕ್ಯಾಮರಾ ಪಡೆಯಲು ಪ್ರಯತ್ನಿಸಿದರು. ಬಹಳ ಕಷ್ಟದಿಂದ ಸೂಪರ್ ಕ್ಯಾಮರಾ ಸಂಪಾದಿಸಿ, ಬಹಳ ಅಪಾಯವನ್ನೆದುರಿಸುತ್ತಾ ನವೆಂಬರ್ ೪ ರ ಜನತಾ ರ್‍ಯಾಲಿಯ 'ಶೂಟಿಂಗ್' ನಡೆಸಿದರು. ಜಯಪ್ರಕಾಶರ ಮೇಲಿನ ಲಾಠಿಚಾರ್ಜ್‌ಗಳನ್ನೂ ಚಿತ್ರೀಕರಿಸಲಾಗಿದೆ. ಮಾರ್ಚ್ ೬ ರ ದಿಲ್ಲಿಯ ಪ್ರಸಿದ್ಧ 'ಜನತಾ ಮೋರ್ಚ್' ಮತ್ತು ಛಾತ್ರಯುವಾ ಸಂಘರ್ಷವಾಹಿನಿಯ ಶಿಬಿರಗಳಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿ ಆಂದೋಳನಗಳನ್ನೂ ಅವರು ತಮ್ಮ ಚಲನಚಿತ್ರದ ಪ್ರಮುಖ ವಿಷಯವನ್ನಾಗಿ ಮಾಡಿಕೊಂಡರು

ದೇಶದ ಹೊರಗೆ

ಇದೇ ಸಮಯದಲ್ಲಿ ತುರ್ತುಪರಿಸ್ಥಿತಿ ಘೋಷಿಸಲ್ಪಟ್ಟಿತು. ಹೆದರಿಕೆಯಿಂದಾಗಿ ಮುಂಬಯಿಯ ಯಾವ ಲ್ಯಾಬೊರೇಟರಿಯೂ ಫಿಲ್ಮ್ ಪ್ರೊಸೆಸಿಂಗ್ ಕಾರ್ಯಕ್ಕೆ ಆನಂದರಿಗೆ ಸಿಗಲಿಲ್ಲ. ಹೇಗೋ ಪ್ರಯತ್ನಿಸಿ ಫಿಲ್ಮ್ ಅನ್ನು ತುಂಡು-ತುಂಡಾಗಿ ಬೇರೆ ಬೇರೆ ಕಡೆಗಳಲ್ಲಿ ತೊಳೆಯಲಾಯಿತು. ಅತ್ಯಂತ ನಂಬಿಕೆಯ ಜನರಿಗೆ ಇದನ್ನು ಒಂದು ತಿಂಗಳವರೆಗೆ ಗುಪ್ತವಾಗಿ ಪ್ರದರ್ಶಿಸಲಾಗುತ್ತಿತ್ತು. ಇದೇ ಹೊತ್ತಿಗೆ ಈ ಫಿಲ್ಮನ್ನು ಪೋಲಿಸರು ಹುಡುಕತೊಡಗಿದರು. ಆದರೆ ಕೆಲವು ನಂಬಿಕೆಯ ಮಿತ್ರರು ಮತ್ತು ಸರ್ಕಾರದ ಉನ್ನತ ಅಧಿಕಾರಿಗಳ (ಅವರ ಹೆಸರನ್ನು ಹೇಳಲು ಆನಂದ್ ಸಿದ್ಧರಿಲ್ಲ) ನೆರವಿನಿಂದ ತುಂಡುತುಂಡು ಮಾಡಿ ಫಿಲ್ಮ್ ಅನ್ನು ದೇಶದ ಹೊರಗೆ ಕಳುಹಿಸಲಾಯಿತು. ಇನ್ನು ಆನಂದ್ ಹೊರದೇಶಕ್ಕೆ ಹೋಗುವ ಸಮಸ್ಯೆ ಎದುರಾಯಿತು. ಹೇಗೋ ಪ್ರಯತ್ನಿಸಿ ಮಾಂಟ್ರೀಲ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ–ಅಧ್ಯಾಪಕ ಹುದ್ದೆಯನ್ನು ಗಳಿಸಿ, ಒಂದುದಿನ ಪೋಲಿಸರು ಇತ್ತ ಅವರ ಫಿಲ್ಮ್ ಹುಡುಕುತ್ತಿದ್ದಾಗ, ಆನಂದ್ ಲಂಡನ್ನಿಗೆ ಹೊರಡುವ ವಿಮಾನದಲ್ಲಿ ಕುಳಿತು, ದೇಶದಿಂದ ಹೊರಗೆ ಹೊರಟುಹೋದರು.

ಮಾಂಟ್ರೀಲಿದಲ್ಲಿ ಅವರು ತುರ್ತುಪರಿಸ್ಥಿತಿಯ ಬಗ್ಗೆ ಮತ್ತೊಂದು ಭಾಗವನ್ನು ಸೇರಿಸಿದರು ಮತ್ತು ಅದಕ್ಕೆ ಇಂಗ್ಲಿಷ್ ವಿವರಣೆ ಜೋಡಿಸಿದರು. ಎಲ್ಲ ತುಂಡುಗಳನ್ನು ಜೋಡಿಸಿ ಹೊಸದಾಗಿ ಅದರ ಪ್ರಿಂಟ್ ತೆಗೆದುಕೊಂಡರು. ಪರದೇಶಗಳಲ್ಲಿ ರಚಿತವಾದ, ಭಾರತದ ಸ್ವಾತಂತ್ರ್ಯಗಳಿಕೆಗೆ ಕಟಿಬದ್ಧವಾದ ಸಂಸ್ಥೆಗಳ ನೆರವಿನಿಂದ ಅವರು ಪ್ರಪಂಚದ ಪ್ರಮುಖ ದೇಶಗಳಿಗೆ ತಮ್ಮ ಫಿಲ್ಮ್ ತೆಗೆದುಕೊಂಡು ಹೋದರು, ಆಗಿನ ಭಾರತ ಸರ್ಕಾರದ ಕುತ್ಸಿತ ಪ್ರಚಾರದ ಮೇಲಿನ ಮುಸುಕು ಕಿತ್ತೆಸೆದರು. ಅಂತರ್ರಾಷ್ಟ್ರೀಯ ಚಲನಚಿತ್ರ ಸಮಾರಂಭದಲ್ಲೂ ಆನಂದರ ಚಿತ್ರ ಪ್ರದರ್ಶಿತವಾಯಿತು.

ತಮ್ಮ ಚಿತ್ರಕ್ಕೆ ಅವರು 'ಕ್ರಾಂತಿಯ ಅಲೆಗಳು' (Waves of Revolution) ಎಂದು ಹೆಸರಿಟ್ಟಿದ್ದಾರೆ. ಈಗ ಭಾರತಕ್ಕೆ ಹಿಂದಿರುಗಿರುವ ಅವರು ಜೊತೆಯಲ್ಲಿ ತಮ್ಮ ಫಿಲ್ಮ್‌ಅನ್ನೂ ತಂದಿದ್ದಾರೆ. ಅವರ ಅಭಿಪ್ರಾಯದಲ್ಲಿ, ಸಮಸ್ಯೆಗಳ ನಿವಾರಣೆಯಾಗಿಲ್ಲ, ಸಮಾಜದ ಸ್ವರೂಪ ಇನ್ನೂ ಹಳೆಯದೇ ಆಗಿದೆ. ಪ್ರಜಾತಾಂತ್ರಿಕ ಜಾಗರೂಕತೆ ಬೆಳೆದದ್ದು ಅದನ್ನು ಮಧ್ಯಮ ಶ್ರೇಣಿಯ ಕೈಗಳಿಂದ ತಪ್ಪಿಸಿ ರೈತರು ಮತ್ತು ಕಾರ್ಮಿಕರ ನೇತೃತ್ವದಲ್ಲಿ ಕ್ರಾಂತಿಕಾರಿ ಚಳುವಳಿಯನ್ನು ಪುನರಾರಂಭಿಸಬೇಕು.

ಕಳೆದ ದಿನಗಳು

ಶ್ರೀ ಸಿದ್ಧಗಂಗಾ ಕ್ಷೇತ್ರದವಿದ್ಯಾಲಯದಲ್ಲಿ
ಶ್ರೀ ಶಿವಕುಮಾರರ ಕೃಪಾ ಹಸ್ತದಡಿಯಲ್ಲಿ,
ಅಧ್ಯಾಪಕರ ಸಹೃದಯತೆಯಲಿ
ತನ್ನ ತಾನರಿವ ಶಿಕ್ಷಣದ ಮಹತ್ವದಲಿ,
ಕಲಿತೆವೆನಿತೋ ಪಾಠಗಳನು
ಪಡೆದೆವಷ್ಟೆ ಅಧ್ಯಾಪಕರ ಪಾತ್ರನನೆ,
ಮಕ್ಕಳೊಡನೆ ಬೆರೆತು ಮರೆತೆವೆಷ್ಟೋ ಈ ಬಾಳ ಚಿಂತೆ.
ಶಿಕ್ಷಣ ಪಡೆಯುತಲಿ ವೃದ್ಧಿಸಿತೆನೊನಿತೋ ನಮ್ಮ ಜ್ಞಾನ.
ಕಳೆದುವೊಂದು ವರುಷವನೆ - ನಿಮಿಷದಂತೆ.
ಹೊಂಗನಿಸಿನಡಿಯಲ್ಲಿ ; ತುಂಬು ಹೃದಯದ ಸ್ನೇಹದಲಿ,
ಮುಗಿಯುತಿಹವು ದಿನಗಳು ; ದಿನದ ಕೊನೆಯ ಅಗಲಿಕೆಯಲಿ
ಮುದಡುತಿವೆ ಮನಗಳು ಕಂಬನಿದುಂಬುವುತಿವೆ ಕಂಗಳು
ಬಾಡದಿರಲಿ ಸ್ನೇಹಜೀವದ ಹೊಂಬಳ್ಳಿ, ಯಾರೆಲ್ಲಿರಲಿ
ಮರಯಬೇಡಿ
—ಈ ಅತ್ಯಮೂಲ್ಯ ಶೈಕ್ಷಣಿಕ ದಿನಗಳನು.

—ರಮಾಕುಮಾರಿ

ಶಿಸ್ತು-ಸುಸ್ತು

ಶಿಸ್ತು ಸಾಮರ್ಥ್ಯಗಳ ಪ್ರತೀಕ ಉಪಾಧ್ಯಾಯ,
ವಿದ್ಯಾರ್ಥಿಗಳಿಗಿದು ಸ್ಫೂರ್ತಿಯ ಅಧ್ಯಾಯ.
ಶಿಕ್ಷಣದ ಆಧಾರ ತತ್ವ ಯೋಜಿಸಿದ ಶಿಸ್ತು,
ಇಡಿ ಶಿಕ್ಷಣರಂಗ ಅದಿಲ್ಲದೇ ಬರೀ ಸುಸ್ತು.

—ಸಂಯಮಿ

ವಿದ್ಯಾಮಂದಿರಗಳಿಗೆ ತಾಯಿ ಬೇರು

— ವಿ. ಎಸ್. ಕಾಂತನವರ

ಭರತ ಖಂಡದಲ್ಲಿ ಬಹುಕಾಲದಿಂದಲೂ ವಿದ್ಯಾಮಂದಿರಗಳು ಮಾತ್ರ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಅಂತಹ ವಿದ್ಯಾಮಂದಿರಗಳಿಗೆ ಮೂಲತಾಯಿ ಬೇರು ಶಾಲಾ ಸುಧಾರಕ ಸಮಿತಿಗಳು. ಅವುಗಳು ವ್ಯಾಪಾರೀ ಮನೋಭಾವವನ್ನು ಬಿಟ್ಟು ನಿಸ್ವಾರ್ಥ ಸೇವಾಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎನ್ನುತ್ತಾರೆ ಮಾನ್ಯ ಲೇಖಕರು.

ಕಾಲಗತಿಸಿದಂತೆಲ್ಲ ಶಿಕ್ಷಣದ ವ್ಯಾಪ್ತಿ ಹೆಚ್ಚಿತು. ಮಟ್ಟದಲ್ಲಿ ಹಾಗೂ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಅಭಿವೃದ್ಧಿಯಾದಾಗ ಭವ್ಯವಾದ ವಿಶ್ವವಿದ್ಯಾನಿಲಯಗಳು ಕಾಣಿಸಿಕೊಂಡವು 'ತಕ್ಷಶಿಲಾ" 'ನಾಲಂದಾ" ಮುಂತಾದ ಅಂದಿನ ವಿಶ್ವವಿದ್ಯಾಲಯಗಳ ಕೀರ್ತಿಯು ಇಂದಿಗೂ ಅಜರಾಮರವಾಗಿದೆ. ಅಂತಹ ಅಮೋಘಕಾರ್ಯಕ್ಕಾಗಿ ನಾಡಿನ 'ಮೂಲೆ ಮೂಲೆಗಳಿಂದಲೂ ಪೋಷಣೆ ಸಿಕ್ಕುತ್ತಿತ್ತು. ಶಿಕ್ಷಕರು ಅಯಾಚಿತ ವೃತ್ತಿಯಲ್ಲಿದ್ದರೂ ಅವರಿಗೆ ಯಾವ ತೆರನಾದ ಅನುಕೂಲತೆಗಳಿಗೂ ಕೊರತೆ ಇರಲಿಲ್ಲ. ವಿದೇಶಗಳಿಂದಲೂ ಸ್ನಾತಕ ವರ್ಗ ಆಗಮಿಸುತ್ತಿತ್ತು. ಅವರೆಲ್ಲರ ಸಂಪೂರ್ಣ ಭರಣ ಪೋಷಣೆಯ ಹೊಣೆ ಹೊತ್ತನಾಡಿಗೆ ನಾಡೇ ಒಂದು ಶಾಲಾಸುಧಾರಕ ಸಮಿತಿಯಲ್ಲವೆ!

ಮಧ್ಯಕಾಲದಲ್ಲಿ ಭಾರತೀಯ ಸತ್ವವನ್ನು ಅಂಧಃಕಾರವು ಆವರಿಸಲಾಗಿ ಪರಕೀಯರು ಪ್ರಭುಗಳಾದರು. ಆಗ ಗುರು ಮನೆಗಳೇ ವಿದ್ಯಾಮಂದಿರಗಳು. ಶಿಕ್ಷಣ ಕಾರ್ಯಕ್ಕೆ ಅಂತಹ ಆಘಾತವೇನೂ ಆಗಲಿಲ್ಲ. ತಮ್ಮ ಮಗು ಓದುತ್ತಿರಲಿ ಇಲ್ಲವೇ ಓದುತ್ತಿರದಿರಲಿ ಪುರವಾಸಿಗಳೆಲ್ಲರೂ ಗುರು ಮನೆಗಳ ಪೋಷಕ-ರಾಗಿದ್ದರು ಯಾವ ಲೆಕ್ಕ ಪತ್ರಗಳಿಲ್ಲದೆ ಮುಕ್ತ ಹಸ್ತದಿಂದ ಮುಕ್ತ ಮನಸ್ಸಿನಿಂದ ಪೋಷಣೆಯನ್ನೀಯುತ್ತಿದ್ದರು. ಇದನ್ನು ತಮ್ಮ ಕರ್ತವ್ಯವೆಂದು ತಿಳಿಯುತ್ತಿದ್ದರು. ಪಾಲಕರ ಶಿಕ್ಷಕರ ಮಧುರ ಬಾಂಧವ್ಯದಿಂದಾಗಿ ಬಾಲಕರು ಸುಖವಾಗಿ ಅಧ್ಯಯನ ಮಾಡುತ್ತಿದ್ದರು.

ಶಿಕ್ಷಣತಜ್ಞರಾದ ಲಾರ್ಡ ಮೆಕಾಲೆ ಹಾಗೂ ಭಾರತದ ಬೆಳಕು ರಾಜಾರಾಮ-ಮೋಹನರಾಯ್ ಇವರುಗಳ ಪ್ರಯತ್ನದ ಫಲವಾಗಿ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ ಭಾರತಕ್ಕೆ ಬಂದಿತು. ಆಗ ಸಂಪೂರ್ಣ ಹೊಣೆಗಾರಿಕೆಯನ್ನು ಸರಕಾರವೇ ಹೊತ್ತುಕೊಂಡಿತು. ಆದರೆ ಕೆಲವೇ ವರ್ಷಗಳಲ್ಲಿ ಶಿಕ್ಷಣವೆಂಬ ರಥವನ್ನು ಜನತೆಯೇ ಜಗ್ಗಬೇಕು ಎಂಬ ನಿರ್ಣಯಕ್ಕೆ ಬಂದ ಅಂದಿನ ಸರಕಾರ ಶಿಕ್ಷಣ ಪ್ರೇಮಿಗಳಾದ ಕೆಲ ಮಹನೀಯರನ್ನು ಸದಸ್ಯರನ್ನಾಗಿ ಆಯ್ದುಕೊಂಡು ತನ್ನ ಹೊಣೆಗಾರಿಕೆಯ ಬಹುಭಾಗವನ್ನು ಅವರಿಗೆ ವಹಿಸಿಕೊಟ್ಟಿತು. ಇದಕ್ಕೆ ನಿದರ್ಶನ ಕೆಲವೇ ವರ್ಷಗಳ ಕೆಳಗೆ ಮುಂಬೈ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಸ್ಕೂಲು ಬೋರ್ಡುಗಳು, ಇಂದಿಗೂ ಆಂಧ್ರಪ್ರದೇಶದಲ್ಲಿದ್ದ ಜಿಲ್ಲಾಪರಿಷತ್ತುಗಳು. ಇವುಗಳೂ ಶಾಲಾಸುಧಾರಕ ಸಮಿತಿಯಂತಹ ಪೋಷಕ ಸಂಸ್ಥೆಗಳೇ ಆಹುದು.

ಪ್ರಜಾಪ್ರಭುತ್ವದ ಈ ಕಾಲದಲ್ಲಿಯಂತೂ ಪೋಷಕ ಸಂಸ್ಥೆಗಳ ಪಾತ್ರ ಹಿರಿದಾಗಿದೆ. ಸರಕಾರವೇ ಪ್ರಜಾಪತ್ತೆ ಎಂದ ಬಳಿಕ ರಾಷ್ಟ್ರದ ಯಾವ ಕಾರ್ಯವೇ ಇರಲಿ ಜನತೆಯೇ ಪೋಷಿಸಿಕೊಂಡು ಹೋಗಬೇಕು. ರಾಷ್ಟ್ರವನ್ನು ಕಟ್ಟುವ ಮಹತ್ಸಾಧನೆ ಶಿಕ್ಷಣದಲ್ಲಿದೆ. ಕಾರಣ ಶಿಕ್ಷಣ ಕಾರ್ಯದಲ್ಲಿ ಪೌರರು ಹೆಚ್ಚಿನ ಸಹಯೋಗ ಸಲ್ಲಿಸಬೇಕು. ಶಿಕ್ಷಣದ ಆಗುಹೋಗುಗಳಿಗೆಲ್ಲ ನಾಗರೀಕರು ಹೊಣೆಯಾಗಿರಬೇಕು ಇಂದು ನಗರ ಜೀವನದಲ್ಲಿ ಮಾತ್ರವಲ್ಲದೆ ಗ್ರಾಮ ಗ್ರಾಮಗಳಲ್ಲಿಯೂ ಶಾಲಾ ಸುಧಾರಕ ಸಮಿತಿಗಳು ರಚಿತವಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ನೀರುಗೊಬ್ಬರಗಳ ಕೊರತೆಯಾಗದಂತೆ ಈ ಸಮಿತಿಗಳು ಶ್ರಮಿಸುತ್ತಲಿವೆ ಅದುವೇ ಕಾರಣವಾಗಿ ಕಡ್ಡಾಯ ಶಿಕ್ಷಣ, ಪ್ರೌಢ ಶಿಕ್ಷಣ ಮುಂತಾದ ಯೋಜನೆಗಳಲ್ಲಿ ಹುಲುಸಾದ ಬೆಳೆ ಬರುತ್ತಲಿದೆ. ಜನಜೀವನದ ಹಾಗೂ ಶಿಕ್ಷಣಗಳ ಸಮನ್ವಯದಿಂದ ರಾಷ್ಟ್ರ ಪುರುಷನ ಸರ್ವಾಂಗ ಸುಂದರತೆಗೆ ಕಳೆಕಟ್ಟಿದಂತಾಗಿದೆ.

ವಿದ್ಯಾಮಂದಿರಗಳ ಪೋಷಕ ಸಂಸ್ಥೆಗಳಲ್ಲಿ ಎರಡು ಪ್ರಕಾರಗಳಿವೆ ನೇರವಾಗಿ ಸರಕಾರದ ಅಧಿಕಾರಕ್ಕೊಳಪಟ್ಟ ವಿದ್ಯಾಮಂದಿರಗಳ ಪೋಷಕ ಸಂಸ್ಥೆಗಳು ಅವೇ ಶಾಲಾ ಸುಧಾರಕ-ಸಮಿತಿಗಳು. ಎರಡನೆಯದಾಗಿ ಸರಕಾರದಿಂದ ಸಹಾಯಧನ ಪಡೆದುಕೊಂಡು ನಡೆವ ವಿದ್ಯಾಮಂದಿರಗಳು. ಅವುಗಳ ಪೋಷಕ ಸಂಸ್ಥೆಗಳಿಗೆ ವಿದ್ಯಾಸಂಸ್ಥೆ ಅಥವಾ ಶಿಕ್ಷಣಸಂಸ್ಥೆ ಎಂದು ಕರೆಯುವರು. ಇವೆರಡೂ ಸಂಸ್ಥೆಗಳ ಕಾರ್ಯ ಒಂದೇ ತೆರನಾದುದು. ವಿದ್ಯಾಮಂದಿರಗಳನ್ನು ಪಾಲಿಸಿ ಪೋಷಿಸಿ ಶಿಕ್ಷಣದ ಅಭ್ಯುದಯಕ್ಕಾಗಿ ನಾಡಿನೇಳ್ಗೆಗಾಗಿ ಶ್ರಮಿಸುವುದೇ ಈ ಪೋಷಕ ಸಂಸ್ಥೆಗಳ ಸತ್ಕಾರ್ಯ. ಈ ಪೋಷಕ ಸಂಸ್ಥೆಗಳಿಂದಲೇ ಶಿಕ್ಷಣರಂಗದ ಆಗುಹೋಗುಗಳು ಇದೊಂದು ನಿಸ್ವಾರ್ಥ ನಿರಪೇಕ್ಷಿತ ಸಂಸ್ಥೆ 'ಪಂಚ ಏವ ಪರಮೇಶ್ವರ' ಎಂಬಂತೆ ಈ ಸಂಸ್ಥೆಗಳ ಕಾರ್ಯಕರ್ತರು ದೇವಸಮಾನರು. ಸೇವೆ ಅವರ ಗುರಿ. ಪ್ರೇಮ ಸೌಹಾರ್ದಗಳು ಬಳಸಬೇಕಾದ ಸಾಧನೆಗಳು. ಆದರೆ.........

ಇತ್ತಿತ್ತಲಾಗಿ ಈ ಪೋಷಕ ಸಂಸ್ಥೆಗಳಲ್ಲಿಯೂ ವಿಕೃತಿಯುಂಟಾಗತೊಡಗಿದೆ. ಅಧಿಕಾರಲಾಲಸೆ, ಸ್ವಪ್ರತಿಷ್ಠೆಗಾಗಿ ಸ್ಪರ್ಧೆ, ತನ್ನವರು ಅನ್ಯರು ಎಂಬ ಭೇದ ಮುಂತಾದ ಕುಲದೋಷಗಳು ಆವರಿಸುತ್ತಲಿವೆ. ನಿಸ್ವಾರ್ಥ ಸೇವೆಯುವ್ಯಾಪಾರದಲ್ಲಿ ಅಗೋಚರ ವಾಗಿದೆ. ಪ್ರೇಮ ಸಹಾನುಭೂತಿಗಳು ಅಹಂ ದಲ್ಲಿ ಪರ್ಯವಸಾನ ಹೊಂದಿವೆ. ಹೀಗಾಗಿ ಪೋಷಣೆ ಶೋಷಣೆಯಾಗಿ ಪರಿವರ್ತಿತವಾದಂತಾಗಿದೆ. ಈ ವಿಕೃತಿಗೆ ಬೇರೆ ನಿದರ್ಶನ ಬೇಕಿಲ್ಲ ಸರಕಾರವು 'ಟ್ರಿಬ್ಯುನಲ್', ನಿಯಮಕ ಮಾಡಬೇಕಾಗಿ ಬಂದುದೇ ಪ್ರಮಾಣ. ಶಿಕ್ಷಕವರ್ಗ ನಾನಾಕಷ್ಟಕೋಟಲೆಗಳನ್ನೆದುರಿಸುವ ಪ್ರಸಂಗಗಳಿಗೆ ಕೊರತೆಯಿಲ್ಲ. ಇಂತಹ ಗೊಂದಲಮಯ ಪರಿಸ್ಥಿತಿಯಲ್ಲಿ ಶಿಕ್ಷಕ-ತನ್ನ ಮನಸ್ಸಿನ ಸಮತೂಕವನ್ನೆ ಕಳೆದು ಕೊಂಡಿದ್ದಾನೆ. ಎಂದಬಳಿಕ ಶಿಕ್ಷಣ ಕ್ಷೇತ್ರದಲ್ಲಿ ಬಂಜೆ ಭೂಮಿ ಹೆಚ್ಚಾಗುತ್ತಿರುವದು ಸ್ವಾಭಾವಿಕ ಇಂತಹ ಪರಿಸ್ಥಿಯಲ್ಲಿ ಮಗುವಿನ ಗತಿ ಏನು? ರಾಷ್ಟ್ರದ ಭವಿಷ್ಯ ವೇನು?—

'ಧರೆ ಬೀಜಂಗಳ ನುಂಗೆ, ಬೇಲಿ ಹೊಲನೆಲ್ಲಂ ಮೇದೊಡೆ ತರುವೇ ಪಣ್ಗಳ ಮೆಲ್ಲೆ, ಮಾತೆವಿಷಮಂ ಪೆತ್ತರ್ಭಕಂಗೂಡಿಸಲ್ ಹರಕೊಲ್ಲಲ್ ಪರಕಾವನೆ? ಎಂಬ ಮಾತು ಎದುರು ಬಂದು ನಿಲ್ಲುತ್ತದೆ.

ನಮ್ಮ ಸರಕಾರದ ಶಿಕ್ಷಣ ವಿಭಾಗವು ಮಾತ್ರ ಈ ಎಲ್ಲ ವಿ ಕಾ ರ ಗ ಳಿ ಗೂ ಕಡಿವಾಣಹಾಕುತ್ತಲೇ ಇಹೆ. ಶಿಕ್ಷಕರ ವೇತನ ಪದ್ಧತಿಯಲ್ಲಿ ಪರಿವರ್ತನ ಮಾಡಿ ಅವರ ಕಾಪಾಡಿದೆ. ಸಕಾರಣ ವಿಲ್ಲದೆ ಶಿಕ್ಷಕರ ಕೂ ದ ಲೂ ಕೊಂಕದಷ್ಟು ಸಂರಕ್ಷಣೆಯಿತ್ತಿದೆ. ಶಿಕ್ಷಕವರ್ಗಕ್ಕೆ ಸಿಕ್ಕಬೇಕಾದ ಸೌಲಭ್ಯಗಳನ್ನು ಕೊಡಿಸಲು ತಾನೇ ಮುಂದಾಗುತ್ತದೆ. ಶಿಕ್ಷಣ ಇಲಾಖೆಯು ತನ್ನ ಅಧಿಕಾರಿಗಳಿಂದ ಪೋಷಕ ಸಂಸ್ಥೆಗಳನ್ನು ನಿಯಂತ್ರಿಸುತ್ತದೆ ನಿರಪರಾಗಳಿಗೆ ಆಶ್ರಯವಿತ್ತಿದೆ. ಸೂಕ್ತವಾದ ನ್ಯಾಯ ದೊರಕುವಂತೆ ಶ್ರಮಿತ್ತಲಿದೆ. ಶಿಕ್ಷಕಪ್ರತಿನಿಧಿಯನ್ನು ಪೋಷಕ ಸಂಸ್ಥೆಯ ಕಾರ್ಯಕಲಾಪಗಳಲ್ಲಿ ಪಾಲುಗೊಳ್ಳುವಂತೆ ಮಾಡಿದೆ. ಆದರೂ ಹಲ್ಲುಕಿತ್ತಿದ ಹಾವುಗಳು ಬುಸುಗುಟ್ಟುತ್ತಲಿವೆ. ಹೆಡೆ ಅಪ್ಪಳಿಸುತ್ತಲಿವೆ. ಜನಮೇ ಜಯನು ಹುಟ್ಟಬರಬೇಕಾದ ಕಾಲಸನ್ನಿಹಿತವಾಗಿದೆ. ಕಾಯಬೇಕು.

ಹಳ್ಳಿ ಹಳ್ಳಿಗಳಲ್ಲಿ ಯೋಜಿತವಾದ ಶಾಲಾಸುಧಾರಕ ಸಮಿತಿಗಳು ಮಾತ್ರ ತಮ್ಮ ಆದರ್ಶವನ್ನು ಕಾಯ್ದುಕೊಂಡು ನಡೆದಿವೆ. ಅಲ್ಲಿ ಸ್ವಾರ್ಥಕ್ಕೆ ಅವಕಾಶವೇಇಲ್ಲ. ತ್ಯಾಗಕ್ಕಾಗಿಯೇ ಅವುಗಳ ಅಸ್ತಿತ್ವ ಹೊರಗಿನಿಂದ ಬಂದ ಶಿಕ್ಷಕನನ್ನು ಸ್ವಾಗತಿಸುತ್ತವೆ. ತಮ್ಮ ಮಕ್ಕಳ ಗುರು ತಮಗೂ ಪೂಜ್ಯ ಎಂಬ ಭಾವನೆಯಿಂದ ಎಲ್ಲ ಅನುಕೂಲತೆಗಳುನ್ನು ಒದಗಿಸುತ್ತವೆ. ಶಿಕ್ಷಕನು ದಾರಿ ತಪ್ಪಿದರೆ ಸರಕಾರದ ಗಮನಕ್ಕೆ ತಂದು ಸರಿ ಪಡಿಸುವಂತೆ ನಿರ್ದೇಶಿಸುತ್ತವೆ. ಶಾಲೆಯ ಪ್ರಧಾನ ಅಧ್ಯಾಪಕರೇ ಈ ಸಮಿತಿಗಳಿಗೆ ಕಾರ್ಯದರ್ಶಿ. ಅವರೇ ಲೆಕ್ಕ ಪತ್ರಗಳನ್ನಿಡುವರು. ಯಾವ ಕಾರ್ಯಕ್ರಮವೇ ಇರಲಿ ತಾವೆಲ್ಲರೂ ಪಾಲುಗಾರರಾಗಿ ಖರ್ಚು ವೆಚ್ಚಗಳ ಹೊಣೆ ಹೊತ್ತು ಶಾಲೆಯ ಅಭಿವೃದ್ಧಿಗೆ ತನ್ಮೂಲಕ ಮಗುವಿನ ಹಾಗೂ ರಾಷ್ಟ್ರದ ಏಳಿಗೆಗಾಗಿ ಶ್ರಮಿಸುತ್ತಿರುವದನ್ನು ಕಾಣುತ್ತೇವೆ.

ಶಿಕ್ಷಣ ರಾಷ್ಟ್ರಪುರುಷನ ಜೀವನಾಡಿ. ಮಗುವಿನ ಸರ್ವಾಂಗೀಣ ವಿಕಾಸ–ದೇಶದ ಭಾವೀಸಂಪತ್ತು. ಈ ಸಂಪದಕ್ಕೆ ಖಣಿ ವಿದ್ಯಾಮಂದಿರಗಳು, ನಿರ್ಮಾಪಕರು ಶಿಕ್ಷಕರು. ಪೋಷಕರು ಪಾಲಕರು. ಇವರ ಹೃನ್ಮನಗಳು ಒಂದಾಗಬೇಕ. ಭಾವನೆ ಬಂಧುರವಾಗಬೇಕು-ಸಂಬಂಧವಾಗಿರಬೇಕು. ಇದರಿಂದಲೇ ಶಾಂತಿ, ಸೌಖ್ಯ, ಸರ್ವೇಜನಾಃ ಸುಖಿನೋಭವಂತು. ಶುಭಂ ಭವತು

(1 ನೇ ಪುಟದಿಂದ)

ವರ್ಗ ಅಲ್ಪ ಸಂಖ್ಯೆಯೆಂದು ಗಮಕಿ ತನ್ನ ಕಾರ್ಯವನ್ನು ಸಡಲಿಸಬಾರದು ತನ್ನ ವ್ಯವಸಾಯದಿಂದ ಒಬ್ಬೇ ಒಬ್ಬ ಮಾನವನಿಗೆ ಕಾವ್ಯದ ದರ್ಶನವಾದರೂ ಅದೊಂದು ಪುಣ್ಯದ ಫಲವೆಂದು ಗಮಕಿಯು ಭಾವಿಸಬೇಕು. ಇಂಥಾ ಯತ್ನದಲ್ಲಿ ನಮಗೆ ತನ್ನ ಆತ್ಮವಿಶ್ವಾಸವೂ ಹೆಚ್ಚುತ್ತದೆ. ಅದೇ ಧರ್ಮದ ತಿರುಳು (ಶ್ರೀವಾಣಿ ಸಿದ್ಧಗಂಗಾ ಡಿ. 77) ಶ್ರೋತೃಗಳ ದೃಷ್ಟಿಯಿಂದ ಕವಿಯ ಮನೋಗತ ಧೈರ್ಯಗಳ ಅರಿವೇ ಕಾವ್ಯದ ಗುರಿಯಾದರೆ, ಗಮಕಿಯ ದೃಷ್ಟಿಯಿಂದ ಕನ್ನಡ ಕಾವ್ಯದ ವಾಚನೆಯಿಂದ ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳುವ ರೀತಿಯೆ ಕಾವ್ಯವಾಚನದ ಗುರಿ. ತಪ್ಪದೆ ಈ ಫಲ ಗಮಕಿಗೆ ಸಿದ್ಧಿಸುತ್ತದೆ.

"SIDDAGANGA" Monthly, Sree Siddaganga Mutt. KRN Q-9
Registered with the Registrar of News papers for India under No. 17139/69